ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 28 ಸೆಪ್ಟೆಂಬರ್ 23, 1979 40 ಪೈಸೆ

ಸಂಪಾದಕೀಯ

ಮೊರಾರ್ಜಿ ದೇಸಾಯಿ ಮತ್ತು ಆರ್.ಎಸ್.ಎಸ್.

ಪ್ರಧಾನಿ ಪಟ್ಟ ಕಳಕೊಂಡ ಬಳಿಕ ರಾಜಕೀಯ 'ಸನ್ಯಾಸ' ಕೈಕೊಂಡ ಮಾಜಿ ಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿಯವರು ಈಗ ನಿರ್ವೀರ್ಯಗೊಂಡ ಜನತಾಪಕ್ಷದ ಚುನಾವಣಾ ಪ್ರಚಾರಕ್ಕೆ ಹೊರಟಿದ್ದಾರೆ. ತಾ. ಹತ್ತೊಂಬತ್ತರಂದು ಕರ್ನಾಟಕದ ಕೆಲವು ಕಡೆ ಭಾಷಣ ಮಾಡಿದ್ದಾರೆ. ಅವರು ಮಾಡಿದ ಭಾಷಣಗಳಲ್ಲಿ ತನ್ನ ನಾಯಕತ್ವದಲ್ಲಿನ ಜನತಾ ಸರಕಾರದ ಸಾಧನೆಗಳನ್ನು ಹೇಳುತ್ತಾ ಈಗಿನ ಬೆಲೆಏರಿಕೆಗೆ ಚರಣ್‌ಸಿಂಗ್‌ರವರು ಮಂಡಿಸಿದ ಈ ಸಾಲಿನ ಬಜೆಟ್ ಕಾರಣವೆಂದೂ, ಆದರಿಂದಾಗಿ ಈಗ ಬೆಲೆಗಳು ಏರಿವೆಯೆಂದೂ ವಾದಿಸಿದ್ದಾರೆ. ತಾನು ಪ್ರಧಾನಿಯಾಗಿದ್ದಾಗ ಚರಣ್‌ಸಿಂಗ್‌ರವರ ಬಜೆಟ್ಟನ್ನು ಸಮರ್ಥನೆ ಮಾಡಿ ಈಗ ಅದನ್ನು ಟೀಕಿಸುವುದು ಸಮಂಜಸವಾದುದೆನಿಸುವುದಿಲ್ಲ. ಬೆಲೆಏರಿಕೆಗೆ ಜನತಾ ಸರ್ಕಾರದ ನೀತಿಯೇ ಕಾರಣವಾಗಿರುತ್ತದೆ. 1977 ರಿಂದಲೂ ಕೊರತೆಯ ಆಯ-ವ್ಯಯ ಪಟ್ಟಿಯನ್ನು ಮಂಡಿಸುತ್ತಾ, ನೋಟುಗಳ ಚಲಾವಣೆಯನ್ನು ಹೆಚ್ಚಿಸುತ್ತಾ, ಆಹಾರ ಧಾನ್ಯ ಸಕ್ಕರೆ ಮುಂತಾದ ಸಾಮಗ್ರಿಗಳ ಬೆಲೆ ಮತ್ತು ಸಾಗಾಣಿಕೆಯ ಮೇಲಿದ್ದ ನಿರ್ಬಂಧಗಳನ್ನೆಲ್ಲಾ ತೆಗೆದುಹಾಕಿದ ಪರಿಣಾಮವಾಗಿ ಈಗ ಬೆಲೆಗಳಲ್ಲಿ ಏರಿಕೆಯಾಗಿದೆ. ಚರಣ್‌ಸಿಂಗ್‌ರವರು ಮಾರ್ಚ್ ತಿಂಗಳಲ್ಲಿ ಹಣಕಾಸಿನ ಸಚಿವರಾಗಿ ಜನತಾ ಸರಕಾರದ ಬಜೆಟ್ಟನ್ನು ಮಂಡಿಸಿದಾಗ ಅದರಲ್ಲಿ ಅನೇಕ ಜನಸಾಮಾನ್ಯರ ನಿತ್ಯೋಪಯೋಗಿ ವಸ್ತುಗಳ ಮೇಲೆ ಹೊರಿಸಿದ ಅಧಿಕ ತೆರಿಗೆಗಳೂ ಇದಕ್ಕೆ ಕಾರಣ. ಹೊರಗಿನಿಂದ ಆಮದು ಮಾಡಿಕೊಳ್ಳುವ ಪೆಟ್ರೋಲ್, ಕಚ್ಚಾ ಎಣ್ಣೆಗಳ ಬೆಲೆಯಲ್ಲಿ ಹೆಚ್ಚಳವಾದ್ದರಿಂದ ಇಲ್ಲಿಯೂ ಇವುಗಳ ಬೆಲೆಯನ್ನು ಸರಕಾರ ಏರಿಸಿದ ಪರಿಣಾಮ ಸಾರ್ವತ್ರಿಕ ಬೆಲೆಏರಿಕೆ ಪರಿಣಮಿಸಿತು. ಕೇಂದ್ರದ ರಾಜಕೀಯ ಗೊಂದಲವೂ ಇದಕ್ಕೆ ಸಹಾಯಕವಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಬೆಲೆಯೇರಿಕೆಯನ್ನು ತಡೆಗಟ್ಟಲು ಧೋರಣೆಯಲ್ಲಿ ಮೂಲಭೂತ ಬದಲಾವಣೆ ಅಗತ್ಯ.

ಸಕ್ಕರೆ, ಆಹಾರ ಧಾನ್ಯ ಮುಂತಾದುವುಗಳ ಮೇಲಿನ ನಿರ್ಬಂಧಗಳನ್ನು ಜನತಾ ಸರಕಾರ ತೆಗೆದು ಹಾಕಿದಾಗ ಇದರಿಂದ ಕಳ್ಳದಾಸ್ತಾನಿಗೂ ಮುಂದೆ ಬೆಲೆಏರಿಕೆಗೂ ಅವಕಾಶವಾಗುತ್ತದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಎಚ್ಚರಿಕೆಯನ್ನು ಕೊಟ್ಟಿತ್ತು ಮತ್ತು ತನ್ನ ಪ್ರತಿಭಟನೆಯನ್ನೂ ವ್ಯಕ್ತಪಡಿಸಿತ್ತು. ಅದರ ಪರಿಣಾಮ ಈಗ ಕಾಣುತ್ತಿದ್ದೇವೆ. ಈ ಪರಿಸ್ಥಿತಿಗೆ ಜನತಾ ಪಾರ್ಟಿ ಸರಕಾರವೇ ಕಾರಣವಿದ್ದು ಅದರಿಂದ ಜಾರಿಕೊಳ್ಳಲು ಮಾಡುವ ಪ್ರಯತ್ನ ವ್ಯರ್ಥವೆನ್ನಬೇಕಾಗಿದೆ.

[ಕಡೆಯ ಪುಟ ನೋಡಿ]

ಸಂಜಯಗಾಂಧಿಯ ಕರ್ಮಕಾಂಡ

ಮಾರುತಿ ಹಗರಣವನ್ನು ಕುರಿತ ಗುಪ್ತಾ ಆಯೋಗದ ವರದಿ ಬಂದಿದೆ. ಇದು ಇಂದಿರಾ ಸರ್ಕಾರದ ಕಾಲದಲ್ಲಿದ್ದ ಭ್ರಷ್ಟಾಚಾರ, ದಗಾಕೋರತನ ಮತ್ತು ಕಾನೂನು ಬಾಹಿರತೆಗಳಿಗೊಂದು ಇಣುಕು ನೋಟವನ್ನು ಕೊಡುತ್ತದೆ. ಹಿಂದೆ ಷಾ ಆಯೋಗ ಕೆಲವು ಅಕ್ರಮಗಳನ್ನು ಬಯಲು ಮಾಡಿತ್ತು. ಈಗ ಗುಪ್ತಾ ಆಯೋಗ ಮಾಜಿ ಪ್ರಧಾನಿಯ ಮಗನಿಗೇ ಸಂಬಂಧಿಸಿದ ಮಾರುತಿ ಹಗರಣದ ಬಗ್ಗೆ ಸತ್ಯ ಸಂಗತಿಯನ್ನು ಹೊರತಂದಿದೆ.

ಎರಡು ದಶಕಗಳ ಹಿಂದೆ ಮುಂದ್ರಾ ಹಗರಣ ನಡೆದಿತ್ತು. ಆಗ ಅತಿಯಾಸೆಯ ವ್ಯಾಪಾರಿಯೊಬ್ಬನು ಎಲ್ಲ ತರಹದ ವಿಧಾನಗಳನ್ನು ಬಳಸಿ ತನ್ನ ಆರ್ಥಿಕ ಸಾಮ್ರಾಜ್ಯವನ್ನು ವಿಸ್ತರಿಸಲು ಬೆಳೆಸಲು ಪ್ರಯತ್ನಿಸಿದಾಗ ಇಡೀ ದೇಶವೇ ಅಲ್ಲೋಲಕಲ್ಲೋಲವಾಗಿತ್ತು. ಇದರ ಬಗ್ಗೆ ಜನರ ಸಿಟ್ಟು ಎಷ್ಟಿತ್ತೆಂದರೆ ಆಗಿನ ಹಣಕಾಸು ಮಂತ್ರಿ ಟಿ. ಟಿ. ಕೃಷ್ಣಮಾಚಾರಿ ರಾಜಿನಾಮೆ ಕೊಡಬೇಕಾಯಿತು. ಇದು ನಡೆದದ್ದು ನೆಹರೂ ಕಾಲದಲ್ಲಿ.

ಆದರೆ ನೆಹರೂವಿನ ಮಗಳ ಸರ್ಕಾರದಡಿ ನಡೆದಿರುವ ಮಾರುತಿ ಮತ್ತಿತರ ಹಗರಣಗಳು ಬೇರೆ ತರಹದ್ದು. ಅವು ಯಾವುದೋ ಜೂಜುಗಾರ ವ್ಯಾಪಾರಿಯನ್ನಾಗಲಿ ಲಾಭಕೋರನನ್ನಾಗಲಿ ಸಂಬಂಧಿಸಿದವಲ್ಲ. ಸರ್ಕಾರದ ಯಜಮಾನಿ, ಅವಳ ಮಗ ಮತ್ತು ಕುಟುಂಬವನ್ನು ಸಂಬಂಧಿಸಿದವು. ಕೆಲವು ವರ್ಷಗಳ ಹಿಂದೆ ಅಮೇರಿಕಾದಲ್ಲಿ ನಡೆದ ವಾಟರ್‌ಗೇಟ್ ಹಗರಣದಿಂದ ಇಡೀ ಜಗತ್ತೇ ಖೇದಗೊಂಡಿತ್ತು, ಚಕಿತಗೊಂಡಿತ್ತು. ಆದರೆ ನಿಕ್ಸನ್‌ನಿಂದಾಗಲಿ ಅಮೇರಿಕಾದ ಆಡಳಿತ ಶೈಲಿಯಿಂದಾಗಲಿ ಇಂದಿರಾ ಗಾಂಧಿ ಏನನ್ನೂ ಕಲಿತಿಲ್ಲವೆಂಬುದನ್ನು ಗುಪ್ತಾ ಆಯೋಗದ ವರದಿ ತೋರಿಸುತ್ತದೆ.

ಸಂಜಯ ಗಾಂಧಿಯ ಹಣದಾಸೆಯನ್ನು ತೀರಿಸಲು ನಡೆದ ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗದ ಕಥೆಯನ್ನು ಹೇಳುತ್ತದೆ ಈ ವರದಿ. ಈತನನ್ನು ಮೆಚ್ಚಿಸಲು ಅಧಿಕಾರಿಗಳು ಮಂತ್ರಿಗಳು ಮತ್ತು ಪ್ರಧಾನ ಮಂತ್ರಿ ಹೇಗೆ ರಕ್ಷಣಾ ವಿಭಾಗದ ಒಳಿತನ್ನೇ ಬಲಿಕೊಟ್ಟರು ಎಂಬುದನ್ನು ಈ ವರದಿ ತೋರಿಸುತ್ತದೆ.

ಗುರ್ಗಾನ್ ಪ್ರದೇಶದಲ್ಲಿ ಸಂಜಯ ಗಾಂಧಿಗೆ 300 ಎಕರೆ ಫಲವತ್ತಾದ ಜಮೀನನ್ನು ಕೊಟ್ಟಿದ್ದರು. ಇದಕ್ಕಾಗಿ ಇಂಡಿಯನ್ ವರ್ಕ್ಸ್ ಆಫ್ ಡಿಫೆನ್ಸ್ ಎಂಬ ಕಾನೂನನ್ನು ಮುರಿದರು. ಮಾರುತಿ ಕಂಪನಿಯ ಎಷ್ಟೋ ಕಟ್ಟಡಗಳನ್ನು ಮಿಲಿಟರಿ ವಿಮಾನಗಳು ಓಡುವ ಸ್ಥಳದಲ್ಲಿ ಕಟ್ಟಲಾಯಿತು. ಇದರ ಬಗ್ಗೆ ಆಕ್ಷೇಪಣೆ ಬಂದಾಗ, ಪ್ರಧಾನಿಯ ಸೆಕ್ರೆಟಾರಿಯಟ್‌ನವರು ಏನೂ

[ಕಡೆಯ ಪುಟ ನೋಡಿ]

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಚಂಡ ವಿಜಯ

ಕೇರಳದಲ್ಲೀಗ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಈಗ ಬಂದ ವರದಿಯಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಅದ್ಭುತವಾದ ಜಯಗಳಿಸಿದೆ. ರಾಜ್ಯದಲ್ಲಿ ಪ್ರಥಮ ಪಕ್ಷವಾಗಿ ಬಂದಿದೆ. ಸಿ. ಪಿ. ಎಂ. ನ ನೇತೃತ್ವದ ರಂಗಕ್ಕೆ ತಿರುವನಂತಪುರ, ಕೊಚ್ಚಿನ್ ಮತ್ತು ಕಲ್ಲಿಕೋಟೆ ಕಾರ್ಪೊರೇಷನ್‌ಗಳಲ್ಲಿ ಬಹುಮತ ದೊರೆತದ್ದಲ್ಲದೆ, ಬಹುಸಂಖ್ಯಾತ ನಗರಸಭೆಗಳಲ್ಲೂ, ಪಂಚಾಯತಿಗಳಲ್ಲೂ ಬಹುಮತ ಗಳಿಸಿ, ಸಿ.ಪಿ.ಐ.ಯನ್ನೂ ಉಳಿದ ಆಳುವ ರಂಗದ ಪಕ್ಷಗಳನ್ನೂ ಸೋಲಿಸಿದೆ. ಕೆಲವು ತಿಂಗಳ ಹಿಂದೆ ನಡೆದ ಶಾಸನಸಭಾ ಉಪಚುನಾವಣೆಯಲ್ಲಿ ಗಳಿಸಿದ ಜಯದ ಬೆನ್ನಲ್ಲಿಯೇ ಈಗ ಈ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ದೊರೆತ ಈ ವಿಜಯದಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಕೇರಳದಲ್ಲಿ ಅತ್ಯಂತ ಜನಪ್ರಿಯವಾದ ಮತ್ತು ಬಲಿಷ್ಠವಾದ ಪಕ್ಷ ಎಂಬದನ್ನು ಜಗತ್ತಿಗೆ ತೋರಿಸಿಕೊಟ್ಟಿದೆ.

ಪರಿಷ್ಕರಣವಾದಿಗಳ ನೇತೃತ್ವದ ಆಳುವ ರಂಗವು ಈ ಚುನಾವಣೆಗಳನ್ನು ಮುಂದೂಡುತ್ತಾ ಬಂದಿತ್ತು. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದು 16 ವರ್ಷಗಳಾಗಿವೆ. ಆಳುವ ರಂಗವು ಚುನಾವಣೆಗಳನ್ನು ನಡೆಸಲು ಕುಂಟು ನೆವಗಳನ್ನು ಮುದೊಡ್ಡಿಕೊಂಡು ಜನತೆಯ ಮುಂದೆ ಬರಲು ಹಿಂದೇಟು ಹಾಕಿತ್ತು. ಈಗ ಅನಿವಾರ್ಯವಾಗಿ ಚುನಾವಣೆಗಳನ್ನು ನಡೆಸಬೇಕಾಯಿತು. ನಮ್ಮ ಪಾರ್ಟಿಯ ಒತ್ತಾಯಕ್ಕೆ ಮಣಿಯಬೇಕಾಯಿತು. ಆಳುವ ರಂಗಕ್ಕೆ ಜನಬೆಂಬಲವಿಲ್ಲವೆಂಬ ಸಿ.ಪಿ.ಎಂ. ನ ವಾದ ಎಷ್ಟು ನಿಜವಾಗಿದೆಂಬುದನ್ನು ಈ ಚುನಾವಣಾ ಫಲಿತಾಂಶ ತೋರಿಸಿಕೊಟ್ಟಿದೆ.

ಸಿ.ಪಿ.ಎಂ. ಮತ್ತದರ ಬೆಂಬಲಿಗರಿಗೆ ಮೂರು ಮಹಾನಗರಗಳಲ್ಲಿ ಬಹುಮತ ದೊರೆತದ್ದಲ್ಲದೆ, ಶೇಕಡ 75ರಷ್ಟು ಪಂಚಾಯಿತಿಗಳಲ್ಲೂ, 31 ನಗರ ಸಭೆಗಳಲ್ಲೂ ಬಹುಮತ ದೊರೆತಿದೆ. ಇನ್ನು 5 ಜಿಲ್ಲೆಗಳ ಚುನಾವಣಾ ಫಲಿತಾಂಶ ಬರಬೇಕಾಗಿದೆ. ಸಿ.ಪಿ.ಎಂ. ಪಾರ್ಟಿ, ಕಾಂಗ್ರೆಸ್ ಮತ್ತು ಆಲ್ ಇಂಡಿಯಾ ಮುಸ್ಲಿಂ ಲೀಗ್‌ಗಳ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿತ್ತು.

ನಮ್ಮ ಪಾರ್ಟಿಯ ವಿರುದ್ಧ ನಿರಂತರ ಅಪಪ್ರಚಾರ, ಧಾಳಿ ದಬ್ಬಾಳಿಕೆಗಳನ್ನು ನಡೆಸಿಕೊಂಡು ಬಂದಿದ್ದ ಬಲಕಮ್ಯುನಿಸ್ಟ್ ಪಾರ್ಟಿಯು ಪ್ರಚಂಡ ಸೋಲನ್ನನುಭವಿಸಿದೆ. ಈ ಪರಿಷ್ಕರಣವಾದಿಗಳ ಬಂಡವಾಳ ಬಯಲಾಗಿದೆ. ಅಧಿಕಾರಕ್ಕೋಸ್ಕರ ಅವರು ಕಳೆದ ಒಂದು ದಶಕದಿಂದಲೂ ನಮ್ಮ ಪಾರ್ಟಿಯ ವಿರುದ್ಧ ಕಮ್ಯುನಿಸ್ಟ್ ವಿರೋಧಿಗಳ ಜೊತೆಗೂ, ಇಂದಿರಾ ಕಾಂಗ್ರೆಸ್ ಮತ್ತಿತರರ ಜೊತೆಗೆ ಸೇರಿಕೊಂಡು ದ್ರೋಹ ಮಾಡಿದ ಸಿ.ಪಿ.ಐ. ಯವರಿಗೆ ಕೇರಳದ ಜನತೆ ಸರಿಯಾದ ಪಾಠವನ್ನು ಕಲಿಸಿದೆ. ಕೇರಳದ ಮಾರ್ಕ್ಸ್‌ವಾದಿ ವಿರೋಧಿ ಸರಕಾರವೂ ಎಡ ಪಕ್ಷದ ಸರಕಾರವನ್ನೂ, ಸಿ.ಪಿ.ಎಂ.ನ ನೇತೃತ್ವದಲ್ಲಿರುವ ಪಶ್ಚಿಮ ಬಂಗಾಳದ ಸರಕಾರಕ್ಕೆ ಹೋಲಿಸಿಕೊಂಡು ವಾದಿಸುತ್ತಿದ್ದ ಸಿ. ಪಿ. ಐ. ಯವರ ದಿವಾಳಿಕೋರತನ ಈಗ ಸ್ಪಷ್ಟವಾಯಿತು. ಕೇರಳದಲ್ಲಿ ನಿಜವಾದ ಎಡರಂಗದ ಸರಕಾರ ಬರಬೇಕಾದರೆ ಆಳುವ ರಂಗ ರಾಜಿನಾಮೆ ಕೊಡಬೇಕೆಂದೂ ಶಾಸನ ಸಭೆಗೆ ಚುನಾವಣೆ ನಡೆಯಬೇಕೆಂದೂ ನಾವು ಒತ್ತಾಯಪಡಿಸುತ್ತಿದ್ದೆವು. ಮಧ್ಯಂತರ ಲೋಕಸಭಾ ಚುನಾವಣೆಯಲ್ಲಿ ಈಗ ದೇಶಾದ್ಯಂತ ರೂಪಗೊಳ್ಳುತ್ತಿರುವ ಕೋಮುವಾರು ವಿರೋಧಿ ಮತ್ತು ಸರ್ವಾಧಿಕಾರಿ ವಿರೋಧಿ ಶಕ್ತಿಗಳು ಕೇರಳದಲ್ಲೂ ಒಂದಾಗಬೇಕಾದರೆ ಮಾರ್ಕ್ಸಿಸ್ಟ್ ವಿರೋಧಿಸರಕಾರ ರಾಜಿನಾಮೆ ಕೊಟ್ಟು ಲೋಕಸಭಾ ಚುನಾವಣೆಯ ಜೊತೆಗೆ ಶಾಸನ ಸಭಾ ಚುನಾವಣೆಯೂ ನಡೆಯಬೇಕೆಂದು ಸಿ.ಪಿ.ಎಂ. ಮಾಡುತ್ತಿದ್ದ ಒತ್ತಾಯಕ್ಕೆ ಈಗ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆ ಸಮರ್ಥನೆ ನೀಡಿದೆ. ಈಗ ಆಳುತ್ತಿರುವ ಕೂಟ ಅಧಿಕಾರದಲ್ಲಿರುವ ಹಕ್ಕನ್ನು ಕಳೆದುಕೊಂಡಿದೆ. ಕೂಡಲೇ ಅದು ರಾಜಿನಾಮೆಕೊಡಲಿ.

ಕಯ್ಯೂರು, ಪುನ್ನಪ್ಪರ-ವಯಲಾರ ಮುಂತಾದ ಹಲವಾರು ಹೋರಾಟಗಳ ವೀರ ಹುತಾತ್ಮರ ತ್ಯಾಗ ಬಲಿದಾನದ ಪರಂಪರೆಯನ್ನು ಹೊಂದಿದ ಕೇರಳದ ಜನತೆಗೆ ಈ ಚುನಾವಣೆಯಲ್ಲಿ ಸಿ.ಪಿ.ಎಂ.ಗೆ ಬೆಂಬಲಕೊಟ್ಟು ಜನತೆಗೆ ದ್ರೋಹ ಬಗೆದವರನ್ನು ಸೋಲಿಸಿದ್ದಕ್ಕೆ ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರಾ ರಾಜ್ಯಗಳಂತೆ ಕೇರಳದಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಅತ್ಯಂತ ಜನಪ್ರಿಯವಾದ ಮತ್ತು ಪ್ರಥಮಪಕ್ಷವೆಂಬುದು ಈಗ ಸ್ಪಷ್ಟ. ಈ ಸಂದರ್ಭದಲ್ಲಿ ಕರ್ನಾಟಕದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಅದ್ಭುತ ಜಯಗಳಿಸಿದ ಕೇರಳದ ಪಾರ್ಟಿಗೆ ತನ್ನ ಅಭಿನಂದನೆಯನ್ನು ಸಲ್ಲಿಸುತ್ತದೆ. ●

ಕೆಲಿಡಿಯೋಸ್ಕೋಪಿನ ಗಾಜಿನ ಚೂರುಗಳಂತೆ ಬದಲಾಗುತ್ತಿರುವ ರಾಜಕೀಯ ವಿನ್ಯಾಸಗಳಿಂದಾಗಿ ಪ್ರಸಕ್ತ ರಾಜಕೀಯ ಪರಿಸ್ಥಿತಿ ಸಂಕೀರ್ಣವಾಗಿ ತೋರುತ್ತಿದೆ. ತೀವ್ರವಾಗುತ್ತಿರುವ ದುಡಿಯುವ ಜನರ ಹೋರಾಟದ ಹಿನ್ನಲೆಯಲ್ಲಿ ಈ ರಾಜಕೀಯ ಪರಿಸ್ಥಿತಿ ಗೆದೆಮಾಡಿಕೊಟ್ಟ ಬೆಳವಣಿಗೆಗಳ ವರ್ಗ ನೆಲೆಯನ್ನು ಗುರುತಿಸುವುದು ತುಂಬ ಮುಖ್ಯ. ತಾತ್ವಿಕ ನೆಲೆಗಳ ಈ ಹುಡುಕಾಟದ ಬಗ್ಗೆ ಆಸಕ್ತಿ ಬುದ್ಧಿಜೀವಿಗಳಲ್ಲಿ ಮಾತ್ರವಲ್ಲ ದುಡಿಯುವ ಜನರ ಸಂಘಟನೆಗಳಲ್ಲಿ ಕೆಲಸ ಮಾಡುತ್ತಿರುವ ಮಿಲಿಟೆಂಟ್ ಹುಡುಗರಲ್ಲೂ ಕೆರಳಿದೆ.

ಕಳೆದ ಭಾನುವಾರ ಧಾರಾಕಾರವಾಗಿ ಮಳೆ ಸುರಿದು ರಸ್ತೆಗಳಲ್ಲಿ ಕೆಸರು ತುಂಬಿಕೊಂಡಿತ್ತು. ಆದರೂ ಭಾರತೀಯ ಸಮಾಜ ವಿಜ್ಞಾನಗಳ ಶಾಲೆಯವರು ಏರ್ಪಡಿಸಿದ್ದ ವಿಚಾರ ಸಂಕಿರಣಕ್ಕೆ ಜನ ಸೇರಿದರು. ವಿಚಾರ ಸಂಕಿರಣದ ವಿಷಯ "ಪ್ರಸಕ್ತ ರಾಜಕೀಯ ಪರಿಸ್ಥಿತಿಯಲ್ಲಿ ವಾಮಪಂಥೀಯ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯ" ಸ್ವಲ್ಪ ಅಕ್ಯಾಡೆಮಿಕ್ ಆಗಿ ತೋರಿದರೂ, ಅದರ ಬಗ್ಗೆ ಕುತೂಹಲ ಕೆರಳಿದ್ದ ಜನರಿಗೇನು ಕೊರತೆಯಿರಲಿಲ್ಲ.

ವಿಚಾರ ಸಂಕಿರಣದಲ್ಲಿ ಮೊದಲು ಮಾತನಾಡಬೇಕಿದ್ದ ಮಂತ್ರಿವರ್ಯ ಕ್ರಾಂತಿಕಾರಿ ಸಂಘಟನೆಗಳು ಹೊಸ ಸಮಾಜದ ಪರಿಕರಗಳನ್ನು ಮೌಲ್ಯಗಳನ್ನು ಸೃಷ್ಟಿಸುವಲ್ಲಿ ವಿಫಲವಾದರೆ, ಒಂದು ಥರದ ಅರಾಜಕೀಯತೆ ನೆಲೆಸುತ್ತದೆ. ಈ ಸ್ಥಿತಿಯಲ್ಲಿ ಮೂರ್ಖರೂ ಧೀರರಕ್ಷಕರಾಗುತ್ತಾರೆ. ಕ್ರಾಂತಿಪೂರ್ವ ರಷ್ಯಾ ಇದಕ್ಕೆ ಸಾಕ್ಷಿ. ಬೊಲ್ಷೆವಿಕ್ ಪಕ್ಷ ಜನರ ಬೆಂಬಲವನ್ನು ಸಂಪೂರ್ಣವಾಗಿ ಗೆಲ್ಲುವ ಮೊದಲು ರಾಸ್‌ಪುಟಿನ್‌ನಂತಹ ಲುಚ್ಚನೂ ಇಡೀ ದೇಶದ ರಾಜ್ಯ ವ್ಯವಸ್ಥೆಯ ಲಗಾಮನ್ನು ತನ್ನ ಕೈಯಲ್ಲಿ ಹಿಡಿದುಕೊಂಡಿದ್ದ.

ತುರ್ತುಪರಿಸ್ಥಿತಿಯ ನಂತರದ ಘಟನಾಚಕ್ರ ಒಂದು ಸುತ್ತು ತಿರುಗಿ ಈಗಿನ ವಿಷಾದಕರ ಪರಿಸ್ಥಿತಿಯಲ್ಲಿ ನಿಂತಿದೆ ಎಂದ ವೆಂಕಟರಾಂ ಅವರು ಜನತಾ ಪಕ್ಷ ಜನರ ಆಶೋತ್ತರಗಳನ್ನು ಈಡೇರಿಸಲು ವಿಫಲವಾದದ್ದಕ್ಕೆ ಕಾರಣ ಅದು ನಿಂತಿದ್ದ ಆರ್ಥಿಕ ತಳಹದಿ ಎಂದರು. ನಮಗೆ ಬೇಕಾಗಿದ್ದ ಆರ್ಥಿಕ ತಳಹದಿ ಎಂದರೆ ದುಡಿಯುವ ಜನರ ಸಂಘಟನೆಯ ಆಧಾರದ ಮೇಲೆ ಚರಿತ್ರೆಯ ಈ ಶಕೆಯನ್ನು ನಿರ್ದೇಶಿಸಲ ಸಾಧ್ಯವಾದ್ದರಿಂದ ತುರ್ತುಪರಿಸ್ಥಿತಿಯ ನಂತರದ ಸ್ವಾತಂತ್ರ್ಯವೊಂದು ಡೆಡ್ ಎಂಡ್ ಆಯಿತು. ಆರ್ಥಿಕ ಸ್ವಾತಂತ್ರ್ಯ ಕನಸಿನ ಮಾತೇ ಆಗಿ ಉಳಿಯಿತು.

ವೆಂಕಟರಾಂ ಅವರ ಆಲೋಚನಾಲ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸುವ ಗೋಜಿಗೆ ಹೋಗಲಿಲ್ಲ.

ಈ ದೇಶದ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸಲು ಬಲಪಕ್ಷಗಳಿಗೆ ಸಾಧ್ಯವಿಲ್ಲ. ಕಳೆದ 32 ವರ್ಷಗಳಲ್ಲಿ ಕಾಂಗ್ರೆಸ್ ಮತ್ತು ಜನತಾ ಎರಡೂ ಪಕ್ಷಗಳು ಈ ದಿಸೆಯಲ್ಲಿ ವಿಫಲವಾಗಿವೆ. ಒಂದು ಥರ ನೋಡಿದರೆ, ಜನತಾ ಕಾಂಗ್ರೆಸ್ಸಿಗಿಂತ ಕೆಟ್ಟದಾಗಿತ್ತು. ಉದಾಹರಣೆಗೆ ಜನತಾದ ಕೈಗಾರಿಕಾ ಮತ್ತು ವಿದೇಶಾಂಗ ನೀತಿಯನ್ನು ಗಮನಿಸಿ. ಇದು ಕೃಷ್ಣನ್ ಅವರ ವಾದದ ಶೈಲಿ.

ಎಡವೇ ಬೇರೆ ಪ್ರಜಾಪ್ರಭುತ್ವವಾದಿಯೇ ಬೇರೆ ಎಂಬುದರಲ್ಲಿ ಅನುಮಾನವಿಲ್ಲ. ಈ ದೇಶದ ಮೂಲಭೂತ ಸಮಸ್ಯೆಗಳಿಗೆ ಎಡ ಪಕ್ಷಗಳು ಮಾತ್ರ ಪರಿಹಾರ ಕೊಡಬಲ್ಲವು. ಆದರೆ ಪ್ರಸಕ್ತ ರಾಜಕೀಯ ಪರಿಸ್ಥಿತಿಯಲ್ಲಿ ಎಡ ಶಕ್ತಿಗಳು ಮಾತ್ರ ಪರ್ಯಾಯ ಕೊಡಲು ಸಾಧ್ಯವಿಲ್ಲದ್ದರಿಂದ ಪ್ರಜಾಪ್ರಭುತ್ವವಾದಿಗಳೊಡನೆ ಸೇರುವ ಅನಿವಾರ್ಯವೊದಗಿ ಬಂದಿದೆ. "ಕೋಮುವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳ ಬಗ್ಗೆ ಇವರಿಗಿರುವ ವಿರೋಧವನ್ನು ನಾವು ಉಪಯೋಗಿಸಿಕೊಳ್ಳಬೇಕು" ಎಂದು ಕೃಷ್ಣನ್ ರವರೂ ಹೇಳಿದರು.

ವಿಚಾರ ಸಂಕಿರಣದ ಈ ಹಂತದಲ್ಲಿ ಸಭಿಕರೊಬ್ಬರು ಕೇರಳದ ಪಂಚಾಯ್ತಿ ಬಲಗಳನ್ನು ಗುರುತಿಸಲು ಕೆಲವು ಒರೆಗಲ್ಲುಗಳಿವೆ. ಅವೇ ಜಾತಿ, ಭಾಷೆ, ತಾಂತ್ರಿಕ ವ್ಯವಸ್ಥೆ, ಬೆಲೆ ನೀತಿ ಮತ್ತು ಆಸ್ತಿ ವ್ಯವಸ್ಥೆ. ವಿಚಿತ್ರವೆಂದರೆ, ಜಾತಿ ಬಗ್ಗೆ ದೇವರಾಜ ಅರಸು ತೆಗೆದುಕೊಂಡ ನಿಲುವು ಎಡಪಂಥೀಯವಾದದ್ದು; ಅದರ ವಿರುದ್ಧ ನಿಲುವು ತೆಗೆದುಕೊಳ್ಳುವ ಎಡಪಕ್ಷಗಳದ್ದು ಬಲಪಂಥೀಯ ನೀತಿ. ಹಾಗೆಯೇ ತಾಯ್ನುಡಿಯು ಆಡಳಿತ ಭಾಷೆಯಾಗಬೇಕೆಂದು ಜನಸಂಘ ತೆಗೆದುಕೊಳ್ಳುವ ನಿಲುವು ಎಡಪಂಥೀಯವಾದದ್ದು. ಹೀಗೆ ಎಡಪಕ್ಷಗಳು ಬಲಪಕ್ಷಗಳು, ಬಲಪಕ್ಷಗಳು ಎಡಪಕ್ಷಗಳು ಆಗಿರುವ ವಿಚಿತ್ರ ಸಾಂಸ್ಕೃತಿಕ ಸಂದರ್ಭ ನಮ್ಮಲ್ಲಿದೆ. ಹೀಗೆ ಪ್ರೊಫೆಸರ್ ನಂಜುಂಡಸ್ವಾಮಿಯವರು ಎಡಬಲಕ್ಕೆ ವಿಚಿತ್ರ ವ್ಯಾಖ್ಯಾನವನ್ನು ಕೊಟ್ಟುಬಿಟ್ಟರು.

ಆದರೆ ಎಡ-ಬಲದ ವ್ಯತ್ಯಾಸವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿದವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಎನ್.ಎಲ್. ಉಪಾಧ್ಯಾಯ ಅವರು ಮಾತ್ರ.

ಸ್ಥಾಪಿತ ಹಿತಾಸಕ್ತಿಗಳನ್ನು ಕಾಪಾಡುವವರು ಬಲಪಂಥೀಯರು. ಜನರ ಆಶೋತ್ತರಗಳ ಈಡೇರಿಕೆಗೆ ದುಡಿಯುವವರು, ಮೂಲಭೂತ ಬದಲಾವಣೆಗೆ ಬದ್ಧರಾಗಿರುವವರು ಎಡಪಂಥೀಯರು.

ವಾಳದ ರಾಷ್ಟ್ರೀಕರಣ, ವಿದೇಶಿ ಬಂಡವಾಳದ ರಾಷ್ಟ್ರೀಕರಣ ಮುಂತಾದ ಮೂಲಭೂತ ಬದಲಾವಣೆಗಳಿಗಾಗಿ ಹೋರಾಟವನ್ನು ತೀವ್ರಗೊಳಿಸಬೇಕು. ಎಲ್ಲ ವಾಮಪಂಥೀಯರನ್ನು ಮತ್ತು ಪ್ರಜಾಪ್ರಭುತ್ವವಾದಿಗಳನ್ನು ಒಗ್ಗೂಡಿಸಲು ಸತತವಾಗಿ ಶ್ರಮಿಸಿದವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದವರು ಮಾತ್ರ. ಈಗಲೂ ಅವರ ಪರಿಶ್ರಮ ಮುಂದುವರಿದಿದೆ. ಫಲ ಕೊಡಲಿದೆ. ಉಪಾಧ್ಯಾಯರ ಆಶಾವಾದ ಇದು.

ಉಪಾಧ್ಯಾಯರು ಮಾತನಾಡಿ ಮುಗಿಸುತ್ತಿದ್ದಂತೆ ಮಾಜಿ ಸಂಸತ್ ಸದಸ್ಯ ಹಾಗೂ ಸಮಾಜವಾದಿ ಧುರೀಣ ಜೆ. ಎಚ್. ಪಾಟೀಲ ಅವರು ವಿಚಾರ ಸಂಕಿರಣಕ್ಕೆ ಆಗಮಿಸಿದರು. ಇದನ್ನು ಗಮನಿಸಿದ ಸಭಾಧ್ಯಕ್ಷ ಪ್ರೊ. ಚಂದ್ರಶೇಖರ್ ಅವರು ಪಾಟೀಲರನ್ನು ಮಾತನಾಡಲು ಆಹ್ವಾನಿಸಿದರು

ಈ ದೇಶದಲ್ಲಿ ತರ್ಕಬದ್ಧವಾಗಿ ಏನು ಆಗಬೇಕೋ ಅದು ಆಗುತ್ತಿಲ್ಲ. ಆಗುತ್ತಿರುವುದಕ್ಕೆ ತರ್ಕವಿಲ್ಲ. ರಾಜನಾರಾಯಣನಂತಹ ಕ್ಷಣಮಾತ್ರ ವಕ್ತಿಯಿಂದ ಶುರುವಾದದ್ದು ಎಲ್ಲೆಲ್ಲೋ ಹೋಗಿ ನಿಂತಿದೆ. ಇಡೀ ರಾಜಕಾರಣವೇ ಉತಲ್‌ಪುತಲ್ ಆಗಿದೆ.

ಇಡೀ ದೇಶದ ರಾಜಕಾರಣವೇ ಈ ರೀತಿ ಗೊಂದಲಕಾರಕವಾಗಿದ್ದರೂ

ಸಂಜಯ್, ರಾಜ್ ಚರಿತ್ರೆಗೆ ತಿರುವು ಕೊಡುತ್ತಾರೆ-ಏಕೆ ?

—ರಮೇಶ್

ಎಲ್. ಜಿ. ಹಾವನೂರು ಅವರು ಬರದಿದ್ದರಿಂದ ಸಮಾಜವಾದಿ ದುರೀಣ ಎಸ್. ವೆಂಕಟರಾಂ ಅವರೇ ಮೊದಲು ಮಾತನಾಡಿದರು.

ಮೊದಲು ಮಾತನಾಡಿದ್ದರಿಂದಲೋ ಏನೋ ವೆಂಕಟರಾಂ ಅವರು ತಮ್ಮ ವಾದವನ್ನು ಮಂಡಿಸುವ ಬದಲು ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದರು.

ನಮ್ಮ ಪ್ರಸಕ್ತ ರಾಜಕೀಯ ಪರಿಸ್ಥಿತಿ ಎಷ್ಟು ವಿಚಿತ್ರವಾಗಿದೆಯೆಂದರೆ ರಾಜನಾರಾಯಣ್, ಸಂಜಯಗಾಂಧಿಯಂತಹವರೂ ಚರಿತ್ರೆಗೆ ತಿರುವು ಕೊಟ್ಟುಬಿಡುತ್ತಾರೆ. ಆದರೆ ತರ್ಕಬದ್ಧವಾಗಿ ಆಲೋಚಿಸುವವರು, ಜನರ ಆಶೋತ್ತರಗಳಿಗೆ ಸ್ಪಂದಿಸುವವರು ಯಾವುದೇ ಪರಿಣಾಮವನ್ನು ಬೀರಲು ಅಶಕ್ತರಾಗುತ್ತಾರೆ. ಇದು ವೆಂಕಟರಾಂ ಅವರ ಮೊದಲ ಪ್ರಶ್ನೆ. ವಿಚಾರ ಸಂಕಿರಣದಲ್ಲಿ ಇದಕ್ಕೆ ಯಾರೂ ಉತ್ತರ ಕೊಡಲಿಲ್ಲ. ಆದರಿದು ತಲೆಕೆಡಿಸಿಕೊಳ್ಳಬೇಕಾದ ವಿಷಯವೆ ಸರಿ. ನನಗನ್ನಿಸುವುದು ಇಷ್ಟು; ಯಾವುದೇ ಒಂದು ವ್ಯವಸ್ಥೆ ತನ್ನ ಚಾರಿತ್ರಿಕ ಉಪಯುಕ್ತತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಾಗ ಅದರ ಎಲ್ಲ ಮೌಲ್ಯಗಳು ಛಿದ್ರಗೊಳ್ಳುತ್ತವೆ. ಇಂಥ ಸಂದರ್ಭದಲ್ಲಿ ಹರಿ ಮುಂದೆ ಈ ದಿಕ್ಕಿನಲ್ಲಿ ಚಲಿಸಿತು: ನಮ್ಮ ದೇಶದಲ್ಲಿ ಮೂಲಭೂತ ಬದಲಾವಣೆಗೆ ಬದ್ಧರಾದ ಜನ ಸಾಕಷ್ಟಿದ್ದರೂ ಅವರನ್ನು ಒಂದೇ ವೇದಿಕೆಯಲ್ಲಿ ತರಲು ಸಾಧ್ಯವಿದೆಯೇ? ಕರ್ನಾಟಕದಲ್ಲಿ 801 ಟ್ರೇಡ್‌ಯೂನಿಯನ್‌ಗಳಿವೆ. ಅನೇಕ ರೈತ ಸಂಘಟನೆಗಳಿವೆ. ಕೆಲವು ಯುವಜನರ ಗುಂಪುಗಳು ಇವೆ. ಇವರೆಲ್ಲರನ್ನು ಒಂದುಗೂಡಿಸಲು ಸಾಧ್ಯವೇ ?

ಇವರೆಲ್ಲಾ ಒಂದಾದ ಮೇಲೆ ಹಾಕಿಕೊಳ್ಳಬೇಕಾದ ಕಾರ್ಯಕ್ರಮವೇನು ? ಯಾವ ಆರ್ಥಿಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ?

ಇವು ವೆಂಕಟರಾಂ ಪ್ರಶ್ನೆಗಳು. ಅವುಗಳಿಗೆ ಅವರೇ ಉತ್ತರ ಕೊಟ್ಟರು. ಭೂಸುಧಾರಣೆಗಳಿಗೆ, ಬೃಹತ್ ಉದ್ಯಮಗಳ ರಾಷ್ಟ್ರೀಕರಣ, ಪೂರ್ಣ ಉದ್ಯೋಗದ ಭರವಸೆ ಮುಂತಾದ ಮೂಲಭೂತ ಪರಿವರ್ತನೆಗಳಿಗೆ ಕಟಿಬದ್ಧರಾದರೆ ಈ ಜನಶಕ್ತಿಗಳು ಬೆಳೆಯಲು ಸಾಧ್ಯ.

ವೆಂಕಟರಾಂ ಅವರ ನಂತರ ಮಾತನಾಡಿದ ಸಿ. ಪಿ. ಐ. ನಾಯಕ ಎಂ. ಎಸ್. ಕೃಷ್ಣನ್ ಅವರು ವಾಮಪಂಥ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಚುನಾವಣೆಯಲ್ಲಿ ಸಿ.ಪಿ.ಐ. ಇಂದಿರಾ ಕಾಂಗ್ರೆಸ್ ಜೊತೆಗೆ ಸೇರಿದ ಬಗ್ಗೆ ತಕರಾರೆತ್ತಿದ್ದರು. ಅದಕ್ಕೆ ಕೃಷ್ಣನ್ ಅವರು, "ಚುನಾವಣೆ ಒಂದು ತಂತ್ರದ ವಿಷಯ. ಕೇರಳದಲ್ಲಿ ನಾವು ಮಾತ್ರವಲ್ಲ ಎಲ್ಲರೂ ಆ ಥರದ ಹೊಂದಾಣಿಕೆಗಳನ್ನು ಮಾಡಿಕೊಂಡಿದ್ದರು" ಎಂದು ಉತ್ತರ ಕೊಟ್ಟರು.

ಮುಂದೆ ಇನ್ನೊಬ್ಬ ಸಭಿಕರು ಅಸ್ಸಾಂನಲ್ಲಿ ಸಿ.ಪಿ.ಐ. ಇಂದಿರಾ ಕಾಂಗ್ರೆಸ್ಸಿನ ಜೊತೆಗೆ ಸರ್ಕಾರ ರಚಿಸಿರುವುದರ ಬಗ್ಗೆ ಪ್ರಶ್ನೆ ಕೇಳಿದರು. "ಈ ವಿಷಯ ನನಗೆ ಗೊತ್ತೇ ಇಲ್ಲ" ಎಂದು ಕೃಷ್ಣನ್ ಅವರು ಉತ್ತರ ಕೊಟ್ಟರು.

ತಮ್ಮ ಎಂದಿನ ತುಂಟತನದಿಂದ ಮಾತನಾಡಿದ ಪ್ರೊ.ಎಂ.ಡಿ. ನಂಜುಂಡಸ್ವಾಮಿಯವರ ವಾದ ಸಾಕಷ್ಟು ವಿಚಿತ್ರವಾಗಿಯೆ ಇತ್ತು.

ವಿಚಾರ ಸಂಕಿರಣದ ವಿಷಯದತ್ತ ಅವರ ಪ್ರಥಮ ಗಮನ: "ಎಡವಲ್ಲದ ಪಕ್ಷಗಳು ಪ್ರಜಾಪ್ರಭುತ್ವವಾದಿಗಳಾಗಬಲ್ಲುವು. ಪ್ರಜಾಪ್ರಭುತ್ವವಾದಿಯಲ್ಲದ ಪಕ್ಷಗಳೂ ಎಡವಾಗಬಹುದು ಎನ್ನುವುದು ಈ ವಿಷಯ ಅರ್ಥವೋ" ಎಂದು ಅವರು ಪ್ರಶ್ನಿಸಿದರು.

ಈ ದೇಶದಲ್ಲಿ ಒಂದು ಪಕ್ಷದ ಎಡ-

ಕೆಲವು ಸಂದರ್ಭಗಳಲ್ಲಿ ಬಲಪಕ್ಷಗಳು ಪ್ರಜಾಪ್ರಭುತ್ವವಾದಿಯಾಗುವ ಸಾಧ್ಯತೆಯಿದೆ. ಉದಾಹರಣೆಗೆ ತುರ್ತುಪರಿಸ್ಥಿಯ ನಂತರ ನಾಗರೀಕ ಹಕ್ಕುಗಳನ್ನು ಪುನರ್ ಸ್ಥಾಪಿಸಿದ ಜನತಾಪಕ್ಷ. ಆದರೆ ಈ ಪಕ್ಷ ತನ್ನ ವರ್ಗಗುಣದಿಂದ ಬಲಪಂಥೀಯವಾದದ್ದು. ಈ ಕಾರಣದಿಂದಲೇ ಜನತಾ ಸರ್ಕಾರ ತನ್ನ ಕೊನೆಯ ದಿನಗಳಲ್ಲಿ ಸ್ಥಾನಬದ್ಧತೆಯಂತಹ 'ಮಿನಿಮೀಸಾ' ವನ್ನು ತರಲು ಪ್ರಯತ್ನಿಸಿದ್ದು.

ಇಷ್ಟು ಹೇಳಿದ ಉಪಾಧ್ಯಾಯ ಅವರು ಜನತಾಪಕ್ಷ ಕೆಲಮಟ್ಟಿಗೆ ಸರ್ವಾಧಿಕಾರ ವಿರೋಧಿ ಆಗಿದ್ದರೂ ಅವರೀಗ ಕೋಮುವಾದಿಗಳನ್ನು ಪ್ರೋತ್ಸಾಹಿಸುತ್ತಿರುವುದರಿಂದ ಅವರನ್ನು ವಿರೋಧಿಸಬೇಕು ಎಂದರು. ನಿಷ್ಪಕ್ಷಪಾತವಾದ ಚರಿತ್ರೆಯ ಪುಸ್ತಕಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳು ಜಾತೀಯತೆಯ ನಗ್ನ ಸ್ವರೂಪ ಎಂದು ಅವರು ಖಂಡಿಸಿದರು.

ನಮ್ಮ ಮುಂದಿರುವ ಚುನಾವಣೆಯಲ್ಲಿ ಸರ್ವಾಧಿಕಾರಿ ಮತ್ತು ಕೋಮುವಾದಿ ಶಕ್ತಿಗಳನ್ನು ಸೋಲಿಸಲು ಸಾಧ್ಯವಾದಷ್ಟು ವಿಶಾಲವಾದ ಐಕ್ಯರಂಗವನ್ನು ಕಟ್ಟಬೇಕು. ಇದರ ಜತೆಗೆ ಭೂ ಸುಧಾರಣೆ, ಗುತ್ತೇದಾರಿ ಬಂಡ

ನಮ್ಮ ತಕ್ಷಣದ ಕರ್ತವ್ಯ ಸ್ಪಷ್ಟವಾಗಿದೆ. ಇಂದಿರಾ ಗಾಂಧಿಯನ್ನು ನಿರ್ನಾಮ ಮಾಡುವುದೇ ಅತ್ಯಂತ ತುರ್ತಿನ ಕೆಲಸ.

ಪಟೀಲರು ಈ ಲಹರಿಯಲ್ಲಿ ಮಾತನಾಡುತ್ತಿದ್ದಾಗ ಸಾಹಿತಿ ಲಂಕೇಶ್ ಅವರು ಆಕ್ಷೇಪಿಸಿದರು. "ಇಂದಿರಾ ಗಾಂಧಿಯನ್ನು ಮುಗಿಸುವುದು ಎಂತೆಲ್ಲಾ ಹೇಳಿಕೊಂಡು ಮತ್ತೊಂದು ಶನಿಸಂತಾನವನ್ನು ಸೃಷ್ಟಿಸುತ್ತಿದ್ದೀರಾ? ಇಂದಿರಾ ಗಾಂಧಿಯನ್ನಲ್ಲಾ ಮುಗಿಸಬೇಕಾದದ್ದು, ಆಕೆಯ ಹಿಂದಿರುವ ಮೌಲ್ಯಗಳನ್ನು" ಎಂದು ಲಂಕೇಶ್ ಸ್ವಲ್ಪ ಖಾರವಾಗಿಯೆ ಮಾತನಾಡಿದರು,

ಇದರಿಂದ ಕಸಿಪಿಸಿಗೊಂಡ ಪಟೀಲರು ಸ್ವಲ್ಪ ಬುದ್ಧಿವಂತಿಕೆಯಿಂದಲೆ ಉತ್ತರಕೊಟ್ಟರು. "ಇಂದಿರಾ ಗಾಂಧಿ ಕೆಲವು ಮೌಲ್ಯಗಳ ಸಂಕೇತ. ಆ ಮೌಲ್ಯಗಳನ್ನು ನಾಶಮಾಡಿ ಎಂತಲೆ ನಾನು ಹೇಳಿದ್ದು. ಇಂದಿರಾ ಗಾಂಧಿಯನ್ನು ವೈಯಕ್ತಿಕವಾಗಿ ನಾಶಮಾಡಿ ಎಂದಲ್ಲ. ಇಂದಿರಾ ಕೆಲವು ಮೌಲ್ಯಗಳಿಗೆ ಸಂಕೇತ ಎಂಬುದು ಎಂತಹ ದಡ್ಡನಿಗೂ ಅರ್ಥವಾಗುತ್ತದೆ. ಅಂಥದರಲ್ಲಿ ನೀವು ಈ ಪ್ರಶ್ನೆ ಕೇಳುವುದು ಸೋಜಿಗ" ಎಂದರು.

[7ನೇ ಪುಟ ನೋಡಿ]

ಆರ್ಥಿಕ ಸಮೀಕ್ಷೆ: [2]

ಸಂಪತ್ ಸಮೃದ್ಧಿಯಲ್ಲಿ ಬಡತನ ದಾರಿದ್ರ್ಯ

ಆರ್. ಚಂದ್ರ

ನಿರುದ್ಯೋಗ :

1961ರ ಜನಗಣನೆಯಂತೆ, ದೇಶದ ಒಟ್ಟು 439 ಮಿಲಿಯ ಜನಸಂಖ್ಯೆಯಲ್ಲಿ ಶೇ. 43 ರಷ್ಟು-189 ಮಿಲಿಯ ಜನರು ಉದ್ಯೋಗಸ್ಥರಿದ್ದರು. 1971ರ ಜನಗಣನೆಯಂತೆ, ಒಟ್ಟು 548 ಮಿಲಿಯ ಜನಸಂಖ್ಯೆಯಲ್ಲಿ ಕೇವಲ ಶೇ. 33ರಷ್ಟು-179 ಮಿಲಿಯ ಜನರು ಉದ್ಯೋಗಸ್ಥರಿದ್ದರು. ಅಂದರೆ, ಒಂದು ದಶಕದಲ್ಲಿ ಜನಸಂಖ್ಯೆಯು 109 ಮಿಲಿಯದಷ್ಟು ಹೆಚ್ಚಾದರೂ ಉದ್ಯೋಗಸ್ಥರ ಸಂಖ್ಯೆಯು 10 ಮಿಲಿಯದಷ್ಟು ಕಡಿಮೆಯಾಯಿತು! ಮಾರ್ಚ್ '78ರ ಅವಧಿಯಲ್ಲಿ ದೇಶದ ಒಟ್ಟು ಉದ್ಯೋಗಸ್ಥರ ಸಂಖ್ಯೆಯು 261 ಮಿಲಿಯ ಎಂದು ಅಂದಾಜು ಮಾಡಲಾಗಿದ್ದು ಸದ್ಯದ ಒಟ್ಟು 625 ಮಿಲಿಯ ಜನಸಂಖ್ಯೆಯ ಶೇ. 42 ರಷ್ಟಾಗಿದೆ. 1971ರ ಜನಗಣನೆಯಲ್ಲಿ ಕೆಲಸಮಾಡಲು ಯೋಗ್ಯರಾದ 15-60 ವರುಷದ ಪ್ರಾಯದ ಜನರು ಒಟ್ಟು ಜನಸಂಖ್ಯೆಯ ಶೇ. 52 ರಷ್ಟು ಎಂದು ಅಂದಾಜು ಮಾಡಲಾಗಿತ್ತು. ಇದರಂತೆ 1971 ರಲ್ಲಿ ಮತ್ತು ಮಾರ್ಚ್ '78 ರಲ್ಲಿ ಉದ್ಯೋಗಾರ್ಹರಾದ ಜನರ ಒಟ್ಟು ಸಂಖ್ಯೆಯು ಅನುಕ್ರಮವಾಗಿ 285 ಮಿಲಿಯ ಮತ್ತು 325 ಮಿಲಿಯವಾಗುವುದು. ಹೀಗಾಗಿ ಸಪ್ರಾಯಸ್ಥರಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಈ ಅವಧಿಯಲ್ಲಿ ಅನುಕ್ರಮವಾಗಿ 96 ಮಿಲಿಯ ಮತ್ತು 146 ಮಿಲಿಯ ಎಂದು ಅಂದಾಜು ಮಾಡಬಹುದು. ಒಟ್ಟು ಉದ್ಯೋಗಸ್ಥರಲ್ಲಿ 1973 ರಲ್ಲಿಯೇ 10.7 ಮಿಲಿಯದಷ್ಟು 5-15 ವರುಷ ಪ್ರಾಯದ ಮಕ್ಕಳೂ ಸೇರಿರುವುದರಿಂದ ಸಪ್ರಾಯಸ್ಥ ನಿರುದ್ಯೋಗಿಗಳ ಸಂಖ್ಯೆಯು ಇನ್ನಷ್ಟೂ ಹೆಚ್ಚಿಗೆ ಇರುವುದನ್ನು ಗಮನಿಸಬಹುದು. ಸಪ್ರಾಯಸ್ಥ ನಿರುದ್ಯೋಗಿಗಳಲ್ಲಿ ಮಹಿಳೆಯರ ಸಂಖ್ಯೆಯೇ ಅತ್ಯಧಿಕವಾಗಿದೆ. 1921 ರಲ್ಲಿ ಪ್ರತಿ 100 ಮಹಿಳೆಯರಲ್ಲಿ 27 ಜನರು ಉದ್ಯೋಗಸ್ಥರಾಗಿದ್ದರೆ, 1971 ರಲ್ಲಿ ಕೇವಲ 12 ಜನರು ಉದ್ಯೋಗಸ್ಥರಾಗಿದ್ದರು. 1971 ರಲ್ಲಿ ಒಟ್ಟು 264 ಮಿಲಿಯ ಮಹಿಳೆಯರಲ್ಲಿ ಅರ್ಧಾಂಶದಷ್ಟು 15-60 ವರುಷ ಪ್ರಾಯದವರೆಂದು ತಿಳಿದರೂ, 132 ಮಿಲಿಯ ಉದ್ಯೋಗಾರ್ಹ ಮಹಿಳೆಯರಲ್ಲಿ ಕೇವಲ 32 ಮಿಲಿಯ ಮಹಿಳೆಯರಷ್ಟೇ ಉದ್ಯೋಗಸ್ಥರಾಗಿದ್ದರು. ಉಳಿದ 100 ಮಿಲಿಯ ಸಪ್ರಾಯಸ್ಥ ಮಹಿಳೆಯರು ಗೃಹಕೃತ್ಯಗಳಿಗೇ ನೇತುಬಿದ್ದವರಾಗಿದ್ದರು. ಉದ್ಯೋಗಸ್ಥ ಮಹಿಳೆಯರಲ್ಲೂ 2.8 ಮಿಲಿಯ ಜನರು 5-15 ವರುಷದ ಹೆಣ್ಣುಮಕ್ಕಳಾಗಿದ್ದು, ಸಪ್ರಾಯಸ್ಥ ನಿರುದ್ಯೋಗಿ ಮಹಿಳೆಯರ ಸಂಖ್ಯೆಯು ಇನ್ನೂ ಹೆಚ್ಚಿಗೆ ಇರುವುದನ್ನು ಗಮನಿಸಬಹುದು. ಸಾಮಾಜಿಕ, ಆರ್ಥಿಕ ಹಿಂದುಳಿಯುವಿಕೆಯಿಂದಾಗಿ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗಗಳಲ್ಲಿ ನಿರುದ್ಯೋಗಸ್ಥರ ಸಂಖ್ಯೆಯು ಅತ್ಯಧಿಕವಾಗಿರುವುದು. 1961, 1971 ಮತ್ತು 1978ರ ಉದ್ಯೋಗಸ್ಥರ ಗಣನೆಯ ಆಧಾರಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದರೂ ಮೇಲಿನ ಅಂಕೆ ಅಂಶಗಳಿಂದ ಸಮಸ್ಯೆಯ ಗಂಭೀರ ಪರಿಸ್ಥಿತಿಯ ಸ್ಪಷ್ಟ ಪರಿಚಯವಾಗುವುದು. ಐದನೇ ಮತ್ತು ಆರನೇ ಪಂಚವಾರ್ಷಿಕ ಯೋಜನೆಗಳಲ್ಲಿ ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸಲು ಅಸಾಧ್ಯ ಎಂದು ಮನಗಂಡು, ನಿರುದ್ಯೋಗಿಗಳಿಗೆ ಮತ್ತು ಅರೆಉದ್ಯೋಗಿಗಳಿಗೆ ಕೆಲವು ಕನಿಷ್ಠ ಕಾರ್ಯಕ್ರಮಗಳ ಮೂಲಕ ಅಲ್ಪಸ್ವಲ್ಪ ಪರಿಹಾರಗಳನ್ನು ನೀಡುವುದಕ್ಕಷ್ಟೇ ಯೋಜನಾಗಾರರು ತಮ್ಮ ಹೊಣೆಗಾರಿಕೆಯನ್ನು ಸೀಮಿತಗೊಳಿಸಿರುವರು!

ಗೃಹಕೃತ್ಯಗಳಲ್ಲಿ ನಿರತರಾಗಿರುವ ಅಸಂಖ್ಯಾತ ಮಹಿಳೆಯರನ್ನು ನಿರುದ್ಯೋಗಿಗಳೆಂದು ಪರಿಗಣಿಸದಿದ್ದರೂ, ಸಪ್ರಾಯಸ್ಥ ಉದ್ಯೋಗಾಕಾಂಕ್ಷಿಗಳನ್ನೇ ಗಣನೆಗೆ ತೆಗೆದುಕೊಂಡರೂ, ದೇಶದ ಸದ್ಯದ ನಿರುದ್ಯೋಗಸ್ಥರ ಸಂಖ್ಯೆಯು 20.6 ಮಿಲಿಯ ಎಂದು ಆರನೇ ಪಂಚವಾರ್ಷಿಕ ಕರಡು ಯೋಜನೆಯಲ್ಲಿ ಅಂದಾಜು ಮಾಡಲಾಗಿದೆ. ಇದರಲ್ಲಿ 16.5 ಮಿಲಿಯ ಗ್ರಾಮೀಣ ಪ್ರದೇಶಗಳಲ್ಲೂ, 4.1 ಮಿಲಿಯ ನಗರ ಪ್ರದೇಶಗಳಲ್ಲೂ ಇರುವರೆಂದು ತಿಳಿದಿದೆ. ಆದರೆ, ಭಾರತ ಸರ್ಕಾರದ ನಿರುದ್ಯೋಗ ಸಮಿತಿಯ, ರಿಸರ್ವ್ ಬ್ಯಾಂಕಿನ ಮತ್ತು ಪ್ರೊ. ರಾಜಕೃಷ್ಣ ಮುಂತಾದವರ ಸಮೀಕ್ಷೆಯಂತೆ 1971 ರಲ್ಲಿಯೇ 18ರಿಂದ 21 ಮಿಲಿಯದಷ್ಟು ನಿರುದ್ಯೋಗಸ್ಥರಿದ್ದರೆಂದು ತಿಳಿದಿದೆ. ನಿರುದ್ಯೋಗ ಸಮಸ್ಯೆಯೊಂದಿಗೇ ಅರೆ ಉದ್ಯೋಗ ಮತ್ತು ಅಗೋಚರ ನಿರುದ್ಯೋಗ ಸಮಸ್ಯೆಗಳೂ ಅತ್ಯಂತ ಗಂಭೀರವಾಗಿವೆ. ಗ್ರಾಮೀಣ ಪ್ರದೇಶಗಳಲ್ಲೂ ನಗರ ಪ್ರದೇಶಗಳಲ್ಲೂ ಬಹುಸಂಖ್ಯಾತ ಉದ್ಯೋಗಾಕಾಂಕ್ಷಿಗಳಿಗೆ ವರುಷದ ಎಲ್ಲಾ ದಿವಸಗಳಲ್ಲಿಯೂ ಕೆಲಸ ಸಿಗುವುದು ದುರ್ಲಭವಾಗುತ್ತಿದೆ. ಪ್ರಪಂಚದ ಎಲ್ಲಾ ದೇಶಗಳಿಗಿಂತ ನಮ್ಮ ದೇಶದಲ್ಲಿಯೇ ನಿರುದ್ಯೋಗಸ್ಥರು ಅತ್ಯಂತ ದೊಡ್ಡ ಪ್ರಮಾಣದಲ್ಲಿರುವರು. ಮುಂದಿನ ಪ್ರತಿ ವರುಷದಲ್ಲಿಯೂ 5 ಮಿಲಿಯ ಹೊಸ ಉದ್ಯೋಗಾಕಾಂಕ್ಷಿಗಳ ಸೇರ್ಪಡೆಯನ್ನು ನಿರೀಕ್ಷಿಸಿ, ಹತ್ತು ವರುಷಗಳಲ್ಲಿ 50 ಮಿಲಿಯ ಜನರನ್ನು ಸೇರಿಸಿ, ಒಟ್ಟು 70 ಮಿಲಿಯಕ್ಕಿಂತಲೂ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕಾಗಿದೆ! ನಿರುದ್ಯೋಗಸ್ಥರಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳಲ್ಲಿ ಹೆಸರು ದಾಖಲೆ ಮಾಡಿದವರ ಸಂಖ್ಯೆಯೇ 1977ರ ಅಂತ್ಯದಲ್ಲಿ 10 ಮಿಲಿಯಕ್ಕೂ ಮೀರಿ ಈಗ 13 ಮಿಲಿಯಕ್ಕೆ ಮುಟ್ಟಿದೆ! ಇದರಲ್ಲಿ ಅರ್ಧಾಂಶದಷ್ಟು ವಿದ್ಯಾವಂತ ನಿರುದ್ಯೋಗಿಗಳು!

ದೇಶದ ಸದ್ಯದ 261 ಮಿಲಿಯ ಉದ್ಯೋಗಸ್ಥರಲ್ಲಿ 101 ಮಿಲಿಯ ಜನರು ಕೂಲಿಸಂಬಳಕ್ಕಾಗಿ ದುಡಿಯುವವರು. ಇವರಲ್ಲಿ 58 ಮಿಲಿಯ ಜನರು ಭೂರಹಿತ ಕೃಷಿಕಾರ್ಮಿಕರು. 17 ಮಿಲಿಯ ಜನರು ಗುಡಿಕೈಗಾರಿಕೆ, ಸಣ್ಣಕೈಗಾರಿಕೆ, ಚಿಕ್ಕಪುಟ್ಟ ವ್ಯಾಪಾರ, ವಾಣಿಜ್ಯ ಸಂಸ್ಥೆಗಳಲ್ಲಿ ತಿಂಗಳ, ವಾರದ, ದಿನದ ಕೂಲಿಸಂಬಳಕ್ಕೆ ದುಡಿಯುವವರು. ಇವರೆಲ್ಲರೂ ಹೆಚ್ಚಾಗಿ ಅಸಂಘಟಿತರಾಗಿದ್ದು, ತಮ್ಮ ಕೆಲಸದ ಮತ್ತು ಜೀವನದ ಮಟ್ಟಗಳನ್ನು ಸುಧಾರಿಸಿಕೊಳ್ಳಲು ತೀರಾ ಅಶಕ್ತರು. ಉಳಿದ ಸುಮಾರು 26 ಮಿಲಿಯ ಜನರು ಸರಕಾರಿ ಹಾಗೂ ಸಾರ್ವಜನಿಕ ಮತ್ತು ಖಾಸಗೀ ಕ್ಷೇತ್ರಗಳ ಆಡಳಿತ, ವ್ಯಾಪಾರ, ವಾಣಿಜ್ಯ, ಕೈಗಾರಿಕಾ ಉದ್ಯಮಗಳಲ್ಲಿ ಕೂಲಿಸಂಬಳಕ್ಕಾಗಿ ದುಡಿಯುವವರು. ಇವರು ಸಾಕಷ್ಟು ಸಂಘಟಿತರಾಗಿರುವರು. ಉಳಿದ 160 ಮಿಲಿಯ ಜನರು ಸ್ವಂತ ಉದ್ಯೋಗದಲ್ಲಿರುವರು. ಇವರಲ್ಲಿ 128 ಮಿಲಿಯ ಜನರು ವ್ಯವಸಾಯದಲ್ಲಿ ನಿರತರಾಗಿರುವರು. ಆದರೆ, 1971ರ ಕೃಷಿ ಗಣನೆಯಂತೆ, ಗ್ರಾಮೀಣ ಪ್ರದೇಶಗಳಲ್ಲಿನ ಒಟ್ಟು 78 ಮಿಲಿಯ ಕುಟುಂಬಗಳಲ್ಲಿ ಸುಮಾರು ಶೇ. 10 ರಷ್ಟು ಕುಟುಂಬಗಳು ಭೂರಹಿತರಾಗಿದ್ದು, ಶೇ. 35 ರಷ್ಟು ಕುಟುಂಬಗಳು ತಲಾ ಒಂದು ಎಕರೆಗಿಂತಲೂ ಕಡಿಮೆ ಭೂಮಿಯನ್ನು ಹೊಂದಿವೆ. ಸುಮಾರು ಅಷ್ಟೇ ಪ್ರಮಾಣದ ಕುಟುಂಬಗಳು 1ರಿಂದ 5 ಎಕರೆಗಳೊಳಗಿನ ವ್ಯವಸಾಯ ಭೂಮಿಯನ್ನು ಹೊಂದಿವೆ. ಆದ್ದರಿಂದ ಸ್ವಂತ ವ್ಯವಸಾಯ ಮಾಡುವ ಕುಟುಂಬಗಳ ಬಹುಪಾಲು ಜನರು ಕೃಷಿ ಕಾರ್ಮಿಕರಾಗಿಯೂ ದುಡಿದು ತಮ್ಮ ಆದಾಯವನ್ನು ಭರತಿ ಮಾಡಿಕೊಳ್ಳಬೇಕಾಗುವುದು. ಅಥವಾ ನಿರುದ್ಯೋಗಿಗಳಾಗಿಯೂ ಅರೆಉದ್ಯೋಗಿಗಳಾಗಿಯೂ ನರಳುತ್ತಿರಬೇಕಾಗುವುದು. ಉಳಿದ 32 ಮಿಲಿಯ ಸ್ವಂತ ಉದ್ಯೋಗಗಳಲ್ಲಿರುವವರು ಹೆಚ್ಚಾಗಿ ವ್ಯಾಪಾರ, ವಾಣಿಜ್ಯ, ಸಾರಿಗೆ, ಸಂಪರ್ಕ, ಕೈಗಾರಿಕೆ ಮುಂತಾದ ಉದ್ಯಮಗಳಲ್ಲಿ ನಿರತರಾಗಿರುವವರು. ಇವರಲ್ಲಿಯೂ ಬಹುಪಾಲು ಜನರು ಚಿಕ್ಕಪುಟ್ಟ ವ್ಯವಹಾರಗಳಲ್ಲಿ ನಿರತರಾಗಿದ್ದು ಸಾಮಾನ್ಯ ಮಟ್ಟದ ಆದಾಯ ಪಡೆಯುವವರು.

ನಿರಕ್ಷರತೆ :

ದೇಶದ ಒಟ್ಟು ಜನರ ಸಾಕ್ಷರತೆಯು 1951ರಲ್ಲಿ ಶೇ. 16.6 ಆಗಿದ್ದು, 1961 ರಲ್ಲಿ ಶೇ. 24.03ಕ್ಕೆ ಏರಿ, 1971 ರಲ್ಲಿ ಶೇ. 29.3ಕ್ಕೆ ಮುಟ್ಟಿದರೂ, ಇಂದು ಶೇ. 35ಕ್ಕೆ ಮೀರಿರಲಾರದು. ಅರ್ಥಾತ್, ಅನಕ್ಷರಸ್ಥರ ಸಂಖ್ಯೆಯು 1951ರಲ್ಲಿ 298 ಮಿಲಿಯ ವಿದ್ದುದು, 1961 ರಲ್ಲಿ 340 ಮಿಲಿಯಕ್ಕೇರಿ, 1971ರಲ್ಲಿ 386 ಮಿಲಿಯಕ್ಕೆ ಮುಟ್ಟಿ, ಇಂದು 405 ಮಿಲಿಯಕ್ಕೂ ಮೀರಿರುವುದು! ಜಗತ್ತಿನ ಒಟ್ಟು ನಿರಕ್ಷರಸ್ಥರಲ್ಲಿ ಅರ್ಧದಷ್ಟು ಭಾರತದಲ್ಲಿಯೇ ಇರುವುದು ಒಂದು ರಾಷ್ಟ್ರೀಯ ಅವಮಾನವೇ ಸರಿ. ಶಾಲೆಗೆ ಸೇರಿದವರನ್ನೆಲ್ಲಾ, ಕೇವಲ ಅ-ಆ ಅಕ್ಷರ ಮಾಲೆಯನ್ನು ಓದಬಲ್ಲವರನ್ನೆಲ್ಲಾ, ಮತ್ತು ಹೆಬ್ಬೆಟ್ಟು ಒತ್ತುವ ಬದಲು ಅಕ್ಷರಗಳಲ್ಲಿ ಸಹಿಹಾಕುವವರನ್ನೆಲ್ಲಾ ಅಕ್ಷರಸ್ಥರೆಂದು ಗಣನೆಗೆ ತೆಗೆದುಕೊಂಡಿರುವುದನ್ನು ಗಮನಿಸಿದರೆ, ನಿಜವಾದ ಅನಕ್ಷರಸ್ಥರ ಸಂಖ್ಯೆಯು ಇನ್ನೂ ಹೆಚ್ಚಾಗಿರುವುದು ಚಿಂತಾಜನಕವಾಗಿದೆ. ಅನಕ್ಷರಸ್ಥರಲ್ಲಿ ಬಹುಪಾಲು ಬಡಮಕ್ಕಳು, ಮಹಿಳೆಯರು, ಪರಿಶಿಷ್ಟ ಜಾತಿಯವರು ಮತ್ತು ಬುಡಕಟ್ಟು ಜನಾಂಗದವರು, ಬಡರೈತರು, ಕೃಷಿ ಕೂಲಿಕಾರರು ಮತ್ತು ಬಡ ಕಾರ್ಮಿಕರು. 1971ರ ಜನಗಣನೆಯಂತೆ, 264 ಮಿಲಿಯ ಮಹಿಳೆಯರಲ್ಲಿ, 80ಮಿಲಿಯ ಪರಿಶಿಷ್ಟ ಜಾತಿಗಳ ಜನರಲ್ಲಿ ಮತ್ತು 38 ಮಿಲಿಯ ಬುಡಕಟ್ಟು ಜನಾಂಗಗಳ ಜನರಲ್ಲಿ ಅನುಕ್ರಮವಾಗಿ ಶೇ. 18.70, ಶೇ. 15.0 ಮತ್ತು ಶೇ. 11.29 ರಷ್ಟೇ ಅಕ್ಷರಸ್ಥರಾಗಿದ್ದರು. ಕೆಲವು ರಾಜ್ಯಗಳಲ್ಲಿ ಇವರಲ್ಲಿ ಶೇ. 1 ರಿಂದ 5 ರಷ್ಟೇ ಅಕ್ಷರಸ್ಥರಾಗಿದ್ದರು. ಇಂದಿಗೂ ಈ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯಾಗಲಿಲ್ಲ.

ದೇಶದ ಸದ್ಯದ ಒಟ್ಟು 625ಮಿಲಿಯ ಜನಸಂಖ್ಯೆಯಲ್ಲಿ ಅರ್ಧಾಂಶದಷ್ಟು 14-60 ವರುಷ ಪ್ರಾಯದವರನ್ನು ವಯಸ್ಕರೆಂದು ಪರಿಗಣಿಸಿದಾಗ, ಅವರಲ್ಲಿ ಮೂರನೇ ಎರಡರಷ್ಟು ಅನಕ್ಷರಸ್ಥರೆಂದು ಅಂದಾಜು ಮಾಡಿದಾಗ, ದೇಶದಲ್ಲಿ ಸದ್ಯ 200 ಮಿಲಿಯಕ್ಕೂ ಹೆಚ್ಚಿನ ವಯಸ್ಕರು ಅನಕ್ಷರಸ್ಥರಾಗಿರುವರು ಎಂದು ತಿಳಿಯಬಹುದು. ವಯಸ್ಕರ ಬೃಹತ್ ಪ್ರಮಾಣದ ಅನಕ್ಷರತೆಗೆ ಮುಖ್ಯ ಕಾರಣ: ಬಡಮಕ್ಕಳು, ಹೆಚ್ಚಾಗಿ ಹೆಣ್ಣು ಮಕ್ಕಳು ಮತ್ತು ನಿಮ್ನ ಜಾತಿಗಳ ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಸೇರದೇ ಉಳಿಯುವುದು ಮತ್ತು ಸೇರಿದವರಲ್ಲಿ ಭಾರೀ ಸಂಖ್ಯೆಯಲ್ಲಿ ಮೊದಲಿನ ಒಂದೆರಡು ವರುಷಗಳಲ್ಲಿಯೇ ತಮ್ಮ ಶಿಕ್ಷಣವನ್ನು ಅರ್ಧಕ್ಕೇ ಬಿಟ್ಟುಬಿಡುವುದು. ಹಾಗೂ ಉತ್ತೀರ್ಣರಾಗದೇ ಇರುವುದು. ಗ್ರಾಮೀಣ ಜನರ ಬಡತನ ದಾರಿದ್ರ್ಯಗಳಿಂದಾಗಿ, 6-14 ವರುಷ ಪ್ರಾಯದ ಮಕ್ಕಳು ಶಾಲೆಗೆ ಬದಲು ತಮ್ಮ ಕುಟುಂಬದ ನಿರ್ವಹಣೆಗೆ ಕೂಲಿಕೆಲಸಗಳಿಗೆ ಹೋಗಬೇಕಾಗುವುದು. ಈ ಬಡಮಕ್ಕಳು, ದೊಡ್ಡವರು ಕೆಲಸಕ್ಕೆ ಹೋದಾಗ ಮನೆಕೆಲಸಗಳ ಹೊಣೆ ಹೊರಬೇಕಾಗುವುದು. ತಮ್ಮ ಪುಟ್ಟ ತಮ್ಮ ತಂಗಿಯಂದಿರನ್ನು ಆರೈಕೆ ಮಾಡಬೇಕಾಗುವುದು. ಸಂವಿಧಾನದಲ್ಲಿ ನಮೂದಿಸಿದಂತೆ, ಹತ್ತು ವರುಷಗಳಲ್ಲಿ-ಅಂದರೆ 1960 ರಷ್ಟರಲ್ಲಿಯೇ 6-14 ವರುಷಪ್ರಾಯದ ಮಕ್ಕಳೆಲ್ಲರಿಗೂ ಕಡ್ಡಾಯ ಹಾಗೂ ಧರ್ಮಾರ್ಥ ಪ್ರಾಥಮಿಕ ಶಿಕ್ಷಣ ಒದಗಿಸಬೇಕಾಗಿತ್ತಾದರೂ, ಮೂರು ದಶಕಗಳ ನಂತರ, ಅಂತರಾಷ್ಟ್ರೀಯ ಮಕ್ಕಳ ವರುಷವಾದ 1979 ರಲ್ಲಿಯೂ ಈ ಗುರಿಸಾಧಿಸಲಾಗಲಿಲ್ಲ!

ಎಲ್ಲಿಯವರೆಗೆ ಬಡತನ, ನಿರುದ್ಯೋಗ ಸಮಸ್ಯೆಗಳು ತಾಂಡವವಾಡುವುವೋ, ಅಲ್ಲಿಯವರೆಗೆ ನಿಯೋಜಿಸಿದಷ್ಟು ಮಕ್ಕಳೆಲ್ಲರೂ ಮೊದಲ ವರುಷ ಶಾಲೆಗೆ ಸೇರಿದರೂ, ಹಿಂದಿನ ಅನುಭವದಂತೆ ಅರ್ಧದಷ್ಟು ಮಕ್ಕಳು ತಮ್ಮ ಶಿಕ್ಷಣವನ್ನು ಪೂರ್ತಿಗೊಳಿಸಲು ಅಸಮರ್ಥರಾಗುವರು. ಪುನಃ ಇದೇ ಮಕ್ಕಳು ಯುವಕರಾಗಿ, ವಯಸ್ಕರಾಗಿ ಅನಕ್ಷರಸ್ಥರ ಅಸಂಖ್ಯಾತ ಸಮುದಾಯಕ್ಕೆ ಸೇರುವರು! ಮಕ್ಕಳ ಶಿಕ್ಷಣವೂ ವಯಸ್ಕರ ಶಿಕ್ಷಣವೂ ಅದರ ನಿಜ ಜೀವನದ ಅವಶ್ಯಕತೆಗಳಿಗಿಂತ ತೀರ ಭಿನ್ನವಾಗಿರುವುದರಿಂದ, ಸದ್ಯದ ಶಿಕ್ಷಣದಲ್ಲಿ ಜನರು ಸಹಜವಾಗಿಯೇ ಅನಾಸಕ್ತರಾಗಿರುವುದನ್ನೂ ಗಮನಿಸಬಹುದು.

ಅನಾರೋಗ್ಯ :

ಪ್ರಪಂಚದಾದ್ಯಂತ ಪ್ರತಿ ವರುಷ, ಐದು ವರುಷದ ಕೆಳಗಿನ ಪ್ರಾಯದ ಸುಮಾರು 1.5 ಮಿಲಿಯ ಮಕ್ಕಳು ಸತ್ವರಹಿತ ಆಹಾರ ಹಾಗೂ ಸಾಂಸರ್ಗಿಕ ರೋಗಗಳ ಪರಿಣಾಮದಿಂದಾಗಿ ಸಾಯುತ್ತಾರೆ. ಅವರಲ್ಲಿ ಶೇ. 90 ಕ್ಕಿಂತ ಹೆಚ್ಚು ಸಾವುಗಳು ಹಿಂದುಳಿದ ದೇಶಗಳಲ್ಲಿ ಸಂಭವಿಸುತ್ತವೆ. ಭಾರತದಲ್ಲಿಯೇ ಪ್ರತಿ ವರುಷ ಈ ಪ್ರಾಯದ ಸಾಯುವ ಮಕ್ಕಳ ಸಂಖ್ಯೆಯು ಒಂದು ಮಿಲಿಯವಾಗಿದ್ದು, ಪ್ರಪಂಚದ ಮೂರನೇ ಎರಡರಷ್ಟಾಗಿದೆ! ಜನಸಂಖ್ಯೆಯಲ್ಲಿ ಈ ಪ್ರಾಯದ ಮಕ್ಕಳ ಸಂಖ್ಯೆಯು ಶೇ. 16.5 ರಷ್ಟೇ ಆಗಿದ್ದರೂ, ಒಟ್ಟು ಸಾಯುವವರ ಸಂಖ್ಯೆಯಲ್ಲಿ ಶೇ. 40 ರಷ್ಟು ಪ್ರಾಯದ ಮಕ್ಕಳೇ ಆಗಿರುವರು. ನಮ್ಮ ದೇಶದಲ್ಲಿ 1970ರ ದಶಕದಲ್ಲಿ ಸ್ವಾಭಾವಿಕ ಮರಣ ದರವು ಪ್ರತಿಸಾವಿರಕ್ಕೆ 16.3 ಆಗಿದ್ದರೂ, ಐದು ವರುಷದ ಕೆಳಗಿನ ಪ್ರಾಯದ ಮಕ್ಕಳ ಮರಣ ದರವು ಪ್ರತಿಸಾವಿರಕ್ಕೆ 139 ಎಂದು ಅಂದಾಜು

[6ನೇ ಪುಟನೋಡಿ]

ಸರ್ವಾಧಿಕಾರಿ-ಕೋಮುವಾದಿಗಳ ಸೋಲಿಗೆ ಸಿ.ಪಿ.ಐ.(ಎಂ.) ಕರೆ

“ಬಹಳ ಕಾಲದಿಂದ ಹದಗೆಡುತ್ತಾ ಬಂದಿದ್ದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಬಿಕ್ಕಟ್ಟುಗಳೇ ಸಂಸತ್ ವಿಸರ್ಜನೆ ಮತ್ತು ಮಧ್ಯಕಾಲೀನ ಚುನಾವಣೆಗಳಿಗೆ ಹಾದಿ ಮಾಡಿಕೊಟ್ಟಿತು.” ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಸೆ. 7ರಿಂದ 9ರವರೆಗೆ ಸಭೆಸೇರಿ ಚರ್ಚಿಸಿದ ನಂತರ ಹೊರಡಿಸಿದ ಪತ್ರಿಕಾ ಹೇಳಿಕೆಯಲ್ಲಿ ವ್ಯಕ್ತಪಡಿಸಲಾಗಿರುವ ಪ್ರತಿಕ್ರಿಯೆ ಇದು. ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯ ಬಿಕ್ಕಟ್ಟಿನಿಂದ ಉಂಟಾದ ಈ ಬೆಳವಣಿಗೆಯನ್ನು ಮುಚ್ಚಿಡಲು ರಾಜಕೀಯ ಪಕ್ಷಗಳು ಮತ್ತು ಗುಂಪುಗಳು ಒಬ್ಬರಮೇಲೊಬ್ಬರು ವೃಥಾ ದೋಷಾರೋಪ ಮಾಡುತ್ತಿದ್ದಾರೆ.

ತಮ್ಮ ಪಕ್ಷವನ್ನು ಅಧಿಕಾರ ಸ್ಥಾನದಿಂದ ಕಿತ್ತು ಬಿಸಾಡಿದ್ದೇ ಈ ಬಿಕ್ಕಟ್ಟುಗಳಿಗೆ ಕಾರಣವೆಂದು ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸಿನವರು ಜನತೆಗೆ ಹೇಳಲು ಶುರುಮಾಡಿದ್ದಾರೆ. ದೇಶದ ಇಂದಿನ ಕಷ್ಟಕಾರ್ಪಣ್ಯಗಳಿಗೆ ಜನತಾ ಸರ್ಕಾರದ ಎರಡುವರೆ ವರ್ಷಗಳ ಆಡಳಿತವೇ ಕಾರಣವೆಂದು ಜನತಾದವರನ್ನು ನಿಂದಿಸುತ್ತಿರುವ ಕಾಂಗೈ ಪಕ್ಷದವರು “ಇಂದಿರಾಗಾಂಧಿಯನ್ನು ಮತ್ತೆ ತನ್ನಿ, ದೇಶವನ್ನು ರಕ್ಷಿಸಿ” ಎಂದು ಘೋಷಣೆ ಕೊಡಲಾರಂಭಿಸಿದ್ದಾರೆ. ಈ ರೀತಿಯ ಘೋಷಣೆಗಳನ್ನು ಕೊಡುವ ಜನ, ಉದ್ದೇಶಪೂರ್ವಕವಾಗಿ ಸತ್ಯಸಂಗತಿಗಳನ್ನು ಮರೆಮಾಚುತ್ತಿದ್ದಾರೆ. ಅದೆಂದರೆ ದೇಶವನ್ನು 30 ವರ್ಷಗಳ ಕಾಲ ಆಳಿದ್ದವರು ಕಾಂಗ್ರೆಸ್ ಪಕ್ಷದವರೇ. ಈ 30 ವರ್ಷಗಳಲ್ಲಿ ಇಂದಿರಾಗಾಂಧಿಯವರ 11 ವರ್ಷಗಳ ಕಾಲದ ಆಡಳಿತವೂ ಸೇರಿದೆ. ಒಟ್ಟಾರೆಯಾಗಿ 30 ವರ್ಷಗಳ ಕಾಂಗ್ರೆಸ್ ಆಳ್ವಿಕೆಯಲ್ಲಿ ಶ್ರೀಮಂತರಾದವರು ಯಾರು? ಏಕಸ್ವಾಮ್ಯ ಮನೆತನಗಳ ಶ್ರೀಮಂತರು ಮತ್ತು ಜಮೀನ್ದಾರರು. ಇವರೆಲ್ಲ ಶ್ರೀಮಂತರಾದದ್ದು ಯಾರ ದುಡಿಮೆಯಿಂದಾಗಿ? ದುಡಿಯುವ ವರ್ಗದ ಮತ್ತು ಬಡರೈತರಿಂದಲ್ಲವೆ? ಕಾಂಗ್ರೆಸ್ಸಿಗರ 30 ವರ್ಷಗಳ ಆಳ್ವಿಕೆಯ ಅವಧಿಯಲ್ಲಿ ವಿದೇಶಿ ಬಂಡವಾಳ ನಮ್ಮ ಆರ್ಥಿಕಜೀವದ ಮೂಲೆಮೂಲೆಯನ್ನು ಹೊಕ್ಕಿಲ್ಲವೆ? ವಿದೇಶಿಯರ ನುಸುಳುವಿಕೆಗೆ ಮತ್ತು ಅವರ ಸುಲಿಗೆಗೆ 30 ವರ್ಷಗಳ ದೀರ್ಘಕಾಲ ಕಾಂಗ್ರೆಸ್ ಆಳ್ವಿಕೆ ಅನುಸರಿಸಿಕೊಂಡು ಬಂದ ಸಾಮ್ರಾಜ್ಯಶಾಹಿ ಪರ ನೀತಿಗಳು ಕಾರಣವಲ್ಲವೆ? ಈ ಸಂಗತಿಗಳನ್ನೆಲ್ಲಾ ಕಾಂಗೈ ಪಕ್ಷದವರು ಇಂದು ಉದ್ದೇಶಪೂರ್ವಕವಾಗಿ ಜನರಿಂದ ಮರೆಮಾಚುತ್ತಿದ್ದಾರೆ.

ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನೆಲ್ಲಾ ಕೊಂಚಕೊಂಚವಾಗಿ ದಮನ ಮಾಡಿಕೊಂಡು ಬಂದು ಕೊನೆಯಲ್ಲಿ ತುರ್ತುಪರಿಸ್ಥಿತಿಯಂತಹ ಸ್ವಾತಂತ್ರರಹಿತ ವ್ಯವಸ್ಥೆಯಲ್ಲಿ ಪರ್ಯವಸನಗೊಂಡ ಇಂದಿರಾ ಆಡಳಿತ ಕುಖ್ಯಾತವಾದದ್ದು. 1975 ರಲ್ಲಿ ಇಂದಿರಾ ಆಡಳಿತ ಈ ದೇಶದ ಸಂವಿಧಾನವನ್ನೇ ತಿರುಗುಮುರುಗು ಮಾಡುವ ಹಾದಿಯ ಕಡೆಗೂ ಹೊರಟಿತ್ತು. ನಮ್ಮ ದೇಶದ ಸಂವಿಧಾನದ ಮೇಲೆ ದಾಳಿ ಮಾಡಿದ ಇಂದಿರಾಗಾಂಧಿ ಮತ್ತು ಅವರ ಕುಟುಂಬದವರು ಹಾಗೂ ಅವರ ನಿಕಟವರ್ತಿಗಳು ದೇಶದ ಖಜಾನೆಯನ್ನೇ ಲೂಟಿ ಮಾಡಿ ತಮ್ಮ ಮನೆಗಳ ಆಸ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಮಾಡಿದ್ದವು. ಈ ವಿಷಯವನ್ನು ಸರ್ಕಾರ ನೇಮಿಸಿದ್ದ ಷಾಹ ಮತ್ತು ಗುಪ್ತಾ ತನಿಖಾ ಆಯೋಗಗಳು ಬಯಲಿಗೆಳೆದಿವೆ. ಇಂತಹ ಕಟು ಅನುಭವಗಳನ್ನು ಕಂಡ ನಮ್ಮ ದೇಶದ ಜನತೆ ಇಂದಿರಾಗಾಂಧಿಯವರನ್ನು ಕಿತ್ತೆಸೆದರು. ಆದರೆ ಈಗ ಮತ್ತೆ ಜನತೆಗೆ ಕಾಂಗೈ ಪಕ್ಷದವರು ಹೇಳುತ್ತಿರುವುದೇನು? “ಇಂದಿರಾಗಾಂಧಿಯನ್ನು ಪುನಃ ಅಧಿಕಾರಕ್ಕೆ ತನ್ನಿ. ದೇಶವನ್ನು ರಕ್ಷಿಸಿ”!

ಜನತಾ ಸರ್ಕಾರದ ನೀತಿಗಳು:

“ಜನತಾಪಕ್ಷದೊಳಗಿದ್ದ ಕೆಲವು ಸ್ವಾರ್ಥಿಗಳು ತಾವು ಮುಂದೆ ಬರಲು ಪಕ್ಷವನ್ನೇ ಬಿಟ್ಟು ಜನತಾ ಸರ್ಕಾರವನ್ನು ಉರುಳಿಸಿದರು.” ಇದು ಜನತಾ ಪಕ್ಷದ ನಾಯಕರು ತಮ್ಮ ಸರ್ಕಾರ ಬಿದ್ದುಹೋದುದಕ್ಕೆ ಕೊಡುತ್ತಿರುವ ಕಾರಣ. ತುರ್ತುಪರಿಸ್ಥಿತಿಗೆ ಕಾರಣರಾದವರ ವಿರುದ್ಧ ನಾವು ಹೋರಾಡುತ್ತಲೇ ಇದ್ದೆವು. ಆದರೆ ಪಕ್ಷದೊಳಗಿನ ಕೆಲವು ಸ್ವಾರ್ಥಿಗಳ ಕಾರಣದಿಂದಾಗಿ ನಮ್ಮ ಸರ್ಕಾರ ಬಹಳ ಕಾಲ ಉಳಿಯಲಿಲ್ಲ. ಜನತಾ ನಾಯಕರು ಹೇಳುತ್ತಿರುವ ಮತ್ತೊಂದು ದೂರು.

ಆದರೆ ವಾಸ್ತವವಾಗಿ ಜನತಾ ಸರ್ಕಾರ ಮಾಡುತ್ತಿದ್ದುದೇನು? ‘ಆಂತರಿಕ ಶಾಸನ’ವನ್ನು ಪುನಃ ಜಾರಿಗೆ ತರಲು ಅದು ಪ್ರಯತ್ನಿಸುತ್ತಿತ್ತು. ಕಾಂಗ್ರೆಸ್ಸಿನ ಆರ್ಥಿಕ ಧೋರಣೆಗಳನ್ನೇ ಪಾಲಿಸುತ್ತಿದ್ದ ಜನತಾ ಸರ್ಕಾರದ ಆಳ್ವಿಕೆಯಿಂದಾಗಿ ದೇಶದ ಜನತೆಯಲ್ಲಿ ಅಸಂತೃಪ್ತಿ ಬೆಳೆಯಲು ಆರಂಭಿಸಿತು. ಜನತೆಯ ಅಸಂತೃಪ್ತಿಯನ್ನು ಬಗ್ಗುಬಡಿಯಲು ಜನತಾದವರೂ ಕಾಂಗ್ರೆಸ್ಸಿಗರಂತೆಯೇ ನಾಗರೀಕ ಸ್ವಾತಂತ್ರ ಹಕ್ಕುಗಳ ದಮನ ಮಾಡಲು ಹೊರಟರು.

ಎರಡು, ಎರಡುವರೆ ವರ್ಷಗಳ ಜನತಾ ಆಳ್ವಿಕೆಯಲ್ಲಿ ಜನತೆಯ ಮೇಲೆ ವಿಪರೀತ ತೆರಿಗೆ ಹಾಕಲಾಯಿತು. ಸರ್ಕಾರದ ಖೋತಾ ಬಜೆಟ್ಟಿನಿಂದಾಗಿ ವಿಪರೀತ ಬೆಲೆ ಏರಿಕೆ ಆಯಿತು. ಇದರಿಂದಾಗಿ ಜನಸಾಮಾನ್ಯರ ನಡುವೆ ಮಾತ್ರ ಅಸಂತೃಪ್ತಿ ಬೆಳೆಯಲಿಲ್ಲ, ಅದು ಪೋಲೀಸು, ಸಿ. ಆರ್. ಪಿ. ವಿಭಾಗಗಳವರೆಗೂ ಹೋಯಿತು. ತಮಗೆ ಉತ್ತಮ ಸೌಲಭ್ಯಗಳುಬೇಕು, ಸಂಘಟನೆಯ ಹಕ್ಕುಗಳುಬೇಕು ಎಂದು ಕೇಳಿದ ಪೋಲೀಸರನ್ನು ನಿರ್ದಯವಾಗಿ ಬಡಿಯಲಾಯಿತು. ಈ ವರ್ಷದ ಜುಲೈನಲ್ಲಿ ಕೇಂದ್ರ ಸರ್ಕಾರವು ಎರಡು ಸುಗ್ರೀವಾಜ್ಞೆಗಳನ್ನು ಹೊರಡಿಸಿತು. ರಿಸರ್ವ್‌ಬ್ಯಾಂಕ್ ನೌಕರರ ಹೋರಾಟದ ನಿರ್ಬಂಧ ಮತ್ತು ಕಡ್ಡಾಯ ಠೇವಣಾತಿ ಹಣ ನೀಡಿಕೆಯ ಮುಂದೂಡಿಕೆಯೇ ಆ ಎರಡು ಸುಗ್ರೀವಾಜ್ಞೆಗಳು. ಸರ್ಕಾರದ ಈ ಎಲ್ಲ ಕ್ರಮಗಳೂ, ಅದು ಹಿಂದಿನ ಕಾಂಗ್ರೆಸ್ ಆಳ್ವಿಕೆಯ ನೀತಿಗಳನ್ನೇ ಅನುಸರಿಸುತ್ತಿದೆ ಎಂಬುದಕ್ಕೆ ಸ್ಪಷ್ಟ ನಿದರ್ಶನಗಳಾದವು. ಈ ದೇಶಕ್ಕೆ ಒಬ್ಬ ಹರಿಜನರನ್ನು ಪ್ರಧಾನಿಯನ್ನಾಗಿ ಮಾಡುವುದನ್ನು ತಡೆಯಲಾಯಿತು- ಮುಂದೆ ನಾವು ಓರ್ವ ಹರಿಜನನನ್ನು ಈ ದೇಶದ ಅತ್ಯಂತ ಉನ್ನತ ಪದವಿಗೆ ಕೂರಿಸುತ್ತೇವೆ ಎಂದು ದೇಶದ ಉದ್ದಗಲಕ್ಕೂ ಪ್ರಚಾರ ಮಾಡಿಕೊಂಡು ಹೊರಟಿರುವ ಇದೇ ಜನತಾ ನಾಯಕರು 1977ರ ಮಾರ್ಚ್‌ನಲ್ಲೇ ಜಗಜೀವನ್ ರಾಂಗೆ ಅವಕಾಶ ನಿರಾಕರಿಸಿದ್ದೇಕೆ?

ಕಳೆದ 30-32 ವರ್ಷಗಳ ತಮ್ಮ ಆಳ್ವಿಕೆಯಲ್ಲಿ ದೇಶವು ಅಧೋಗತಿಗೆ ಇಳಿದಿದ್ದನ್ನು ಮುಚ್ಚಿಕೊಳ್ಳಲು ಬಂಡವಾಳಗಾರ-ಜಮೀನ್ದಾರಿ ಪ್ರತಿನಿಧಿಗಳಾದ ಜನತಾ ಮತ್ತು ಕಾಂಗ್ರೆಸ್ (ಐ) ಪಕ್ಷಗಳೆರಡೂ ಶತಾಯಗತಾಯ ಪ್ರಯತ್ನಿಸುತ್ತಿವೆ. ಒಬ್ಬರ ವಿರುದ್ಧ ಮತ್ತೊಬ್ಬರು ಬೊಬ್ಬೆ ಹಾಕುತ್ತಿದ್ದಾರೆ. “ಸಮಾಜವಾದಿ ಸಮಾಜ”ವನ್ನು ನಾವು ಸ್ಥಾಪಿಸುತ್ತೇವೆ, ತಾವು ಸ್ಥಾಪಿಸುತ್ತೇವೆ ಎಂದು ಒಬ್ಬರಮೇಲೊಬ್ಬರು ಬಿದ್ದು ಹೇಳುತ್ತಿದ್ದಾರೆ. ಆದರೆ “ಸಮಾಜವಾದಿ ಸಮಾಜ” ಸ್ಥಾಪನೆ ಘೋಷಣೆಗಳನ್ನು ಕೊಟ್ಟವರ ಅಧಿಕಾರಾವಧಿಯಲ್ಲೇ ಈ ದೇಶದ ಸಿರಿವಂತರು ಇನ್ನೂ ಹೆಚ್ಚು ಸಿರಿವಂತರಾದದ್ದು, ಬಡವರು ಮತ್ತಷ್ಟು ಬಡವರಾದದ್ದು.

1957 ಮತ್ತು 1967 ರಲ್ಲಿ ಕಾಂಗ್ರೆಸ್ಸು ಈ ದೇಶದಲ್ಲಿ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿತು. 1977 ರಲ್ಲಿ ಅದನ್ನು ಇಡೀ ದೇಶದ ಜನವೇ ಕಿತ್ತೆಸೆದರು. ಅಂದರೆ ಕಾಂಗ್ರೆಸ್ ಪಕ್ಷ ಅನುಸರಿಸುತ್ತಿದ್ದ ನೀತಿಗಳು ಈ ದೇಶದ ಜನತೆಗೆ ಅಪಥ್ಯವಾಗಿದ್ದುವು ಎಂಬುದನ್ನು ಇದು ತೋರಿಸುತ್ತದೆ. ಆದರೆ ಜನತಾಪಕ್ಷದ ನಾಯಕರುಗಳು ಇದರಿಂದ ಯಾವ ಪಾಠವನ್ನು ಕಲಿಯಲಿಲ್ಲ. ಅವರೂ ಕೂಡ ಕಾಂಗ್ರೆಸ್ಸಿನ ನೀತಿಗಳನ್ನೇ ಅನುಸರಿಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೊಟ್ಟ ಎಚ್ಚರಿಕೆಗಳನ್ನು ಜನತಾದವರು ಗಮನಕ್ಕೆ ತೆಗೆದುಕೊಳ್ಳಲಿಲ್ಲ.

ಆರ್. ಎಸ್. ಎಸ್. ಪ್ರಾಬಲ್ಯ:

ಆಳುವ ಪಕ್ಷ ಮತ್ತು ಆಳುವ ಸರ್ಕಾರವಾದ ಜನತಾಪಕ್ಷ ಮತ್ತು ಜನತಾ ಸರ್ಕಾರವು ಕ್ರಮೇಣವಾಗಿ ಆರ್. ಎಸ್. ಎಸ್. ಕೋಮುಸಂಘಟನೆಯ ಪ್ರಾಬಲ್ಯಕ್ಕೆ ಬರತೊಡಗಿತು. “ಹಿಂದೂ ರಾಷ್ಟ್ರ” ನಿರ್ಮಾಣಕ್ಕೆ ಕಟಿಬದ್ಧವಾದ ಆರ್.ಎಸ್.ಎಸ್. ಮತೀಯ ಅಲ್ಪಸಂಖ್ಯಾತರ ವಿರುದ್ಧ ನಿಂತಿತು. ಅದು ರಾಜ್ಯಗಳಿಗೆ ಹೆಚ್ಚು ಅಧಿಕಾರ ಕೊಡಬೇಕೆಂಬ ಬೇಡಿಕೆಯನ್ನು ವಿರೋಧಿಸಿ ಸರ್ವಶಕ್ತಿ ಕೇಂದ್ರದ ಕೈಯಲ್ಲೇ ಇರಬೇಕೆಂದು ವಾದಿಸಿತು. “ಹಿಂದೂ ರಾಷ್ಟ್ರ” ನಿರ್ಮಾಣ ಎಂದರೆ ಜಾತಿ ಪದ್ಧತಿಯನ್ನು ಹಾಗೆಯೇ ಉಳಿಸಿಕೊಳ್ಳುವುದು ಎಂದೇ ಅರ್ಥ. ಇದು ಆಧುನಿಕತೆಯ, ಜಾತ್ಯಾತೀತತೆಯ ಮತ್ತು ಪ್ರಜಾಸತ್ತೆಯ ಮೂಲನೀತಿಗಳಿಗೇ ವಿರುದ್ಧವಾದುದು. ಮುಕ್ತ ವ್ಯಾಪಾರದ ವ್ಯವಸ್ಥೆ ಇರಬೇಕೆಂದು ಬಹಿರಂಗವಾಗೇ ಸಾರಿಕೊಂಡು ಬಂದ ಆರ್. ಎಸ್. ಎಸ್., ಲಾಭಬಡುಕರ, ಕಳ್ಳಮಾರುಕಟ್ಟೆ ವ್ಯಾಪಾರಿಗಳ ಪರವಹಿಸುವ ಕ್ರಮಗಳಲ್ಲದೆ ಮತ್ತೇನು? ಭಾಷೆಯ ವಿಷಯದಲ್ಲೂ ಅದು ಹಿಂದಿ ಪರ ನಿಂತಿತು. ಇದರಿಂದಾಗಿ ಎಲ್ಲಾ ಪ್ರಾದೇಶಿಕ ಭಾಷೆಗಳಿಗೆ ಪೆಟ್ಟಲ್ಲದೆ ಮತ್ತೇನು?

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿನ ಮುಖ್ಯ ಅಧಿಕಾರ ಸ್ಥಾನಗಳನ್ನು ಆಕ್ರಮಿಸಿಕೊಳ್ಳಲು ಶುರುವಾದ ಆರ್.ಎಸ್.ಎಸ್. ತನ್ನ ಪ್ರಭಾವವನ್ನು ಶಿಕ್ಷಣ, ಆಡಳಿತ ಮತ್ತು ಸಾಂಸ್ಕೃತಿಕ ರಂಗಗಳಲ್ಲೂ ಹರಡಲು ಮುಂದಾಯಿತು. ಹೆಚ್ಚಾದ ಅದರ ಪ್ರಭಾವ ಮತ್ತು ಶಕ್ತಿಗಳನ್ನು ಉಪಯೋಗಿಸಿಕೊಂಡು ಆರ್. ಎಸ್.ಎಸ್.ನ ಯಜಮಾನರು ಹಲವಾರು ಸ್ಥಳಗಳಲ್ಲಿ ದಂಗೆಗಳನ್ನು ವ್ಯವಸ್ಥೆ ಮಾಡಲು ಶುರುಮಾಡಿದರು. ಆರ್. ಎಸ್. ಎಸ್ಸಿಗರ ಈ ಕ್ರಮ ದೇಶದಲ್ಲಿನ ಅಲ್ಪಸಂಖ್ಯಾತರಿಗೆ ನೋವು ತಂದಿತು. ಇದರಿಂದಾಗಿ ಜನತಾಪಕ್ಷದೊಳಗೇ ಇದ್ದ ಜಾತೀಯ ಹಾಗೂ ಜಾತ್ಯಾತೀತ ಶಕ್ತಿಗಳ ನಡುವೆ ಘರ್ಷಣೆಯಾಗಿ ಅದು ಪಕ್ಷ ಒಡೆಯುವುದರಲ್ಲಿ ಪರ್ಯವಸಾನವಾಯಿತು.

ಜನತಾಪಕ್ಷ ಒಡೆದುಹೋದಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸಹಜವಾಗೇ ಜಾತ್ಯಾತೀತ ಶಕ್ತಿಗಳಿಗೆ ತನ್ನ ಸಹಾನುಭೂತಿ ತೋರಿಸಿ ಅದರ ಪರ ನಿಂತಿತು. ಆರ್. ಎಸ್. ಎಸ್. ಅಪಾಯವನ್ನು ನಾವು ನಿರಂತರವಾಗಿ ಹೋರಾಡಿಕೊಂಡು ಬರಬೇಕೆಂದು ಪಕ್ಷದ 10ನೇ ಅಧಿವೇಶನದಲ್ಲೇ ನಾವು ಕರೆ ಕೊಟ್ಟಿದ್ದೆವು.

ಮೂರು ಬಣಗಳು:

ಪಕ್ಷದ 10ನೇ ಅಧಿವೇಶನ ಮಾಡಿದ ನಿರ್ಣಯಗಳಂತೆ ನಮ್ಮ ಪಾರ್ಟಿಯು ಆರ್. ಎಸ್. ಎಸ್. ಕೋಮುವಾದಿ ಸಂಘಟನೆಯ ವಿರುದ್ಧ ಸಿಡಿದೆದ್ದವರನ್ನು ಬೆಂಬಲಿಸಿತು ಮಾತ್ರವಲ್ಲ, ಆರ್.ಎಸ್.ಎಸ್.ನವರು ಆಲಿಘರ್, ಜೆಮ್‌ಶೆಡ್‌ಪುರ್ ಮುಂತಾದ ಸ್ಥಳಗಳಲ್ಲಿ ನಡೆಸಿದ ಕೋಮುಗಲಭೆಗಳನ್ನು ಬಹಿರಂಗ ಮಾಡಿತು. ಜನತಾಪಕ್ಷದೊಳಗಿನಿಂದಲೇ ಕೋಮುವಾದಿಗಳ ವಿರುದ್ಧ ಎದ್ದ ಬಂಡಾಯ ಮತ್ತು ಕಾಂಗ್ರೆಸ್ ಪಕ್ಷದೊಳಗೆ (ದೇವರಾಜ ಅರಸು ಅವರು ಇಂದಿರಾಗಾಂಧಿಯವರವಿರುದ್ಧ ಸಿಡಿದೆದ್ದದ್ದೂ ಸೇರಿದಂತೆ) ನಡೆದ ಬೆಳವಣಿಗೆಗಳು ಹೊಸದೊಂದು ಪರಿಸ್ಥಿತಿಯನ್ನೆ ನಿರ್ಮಾಣ ಮಾಡಿತು. ಈ ಹೊಸ ಪರಿಸ್ಥಿತಿ ಎಂದರೆ ಇದುವರೆಗೆ ಇದ್ದ ಎರಡು ಪ್ರಮುಖ ಬಣಗಳಿಗೆ ಬದಲಾಗಿ ಈಗ ರಾಷ್ಟ್ರ ಮಟ್ಟದಲ್ಲಿ ಮೂರು ಬಣಗಳಾದವು. ಈ ಮೂರು ಬಣಗಳೂ ಈಗ ಮುಂಬರುವ ಲೋಕಸಭಾ ಮಧ್ಯಕಾಲೀನ ಚುನಾವಣೆಯನ್ನು ಎದುರಿಸಬೇಕಾಗಿದೆ.

ಒಂದು ಕಡೆ ಕಾಂಗ್ರೆಸ್(ಐ) ಪಕ್ಷದವರು ತಾವು ಹಿಂದೆ ಮಾಡಿದ ಯಾವುದೇ ಅತಿರೇಕಗಳನ್ನು ಒಪ್ಪಿಕೊಳ್ಳದೆ, ಅದಕ್ಕಾಗಿ ಜನತೆಯ ಕ್ಷಮೆ ಕೇಳದೆ ಅದನ್ನೇ ಮತ್ತೆ ಸಮರ್ಥಿಸುತ್ತಿದ್ದಾರೆ ಮತ್ತು ಇಂದಿರಾಗಾಂಧಿಯನ್ನು ಪುನಃ ಅಧಿಕಾರಕ್ಕೆ ತಂದು ದೇಶಕ್ಕೆ ಸುಭದ್ರತೆಯನ್ನು ತಂದುಕೊಡಿ ಎಂದು ಹೇಳಲು ಶುರುಮಾಡಿದ್ದಾರೆ.

ಇನ್ನೊಂದೆಡೆ ಜನತಾ ಪಕ್ಷದವರು ಅದರಲ್ಲಿನ ಸಿ.ಎಫ್.ಡಿ., ಸೋಷಲಿಸ್ಟರು ಮತ್ತು ಸಂಸ್ಥಾ ಕಾಂಗ್ರೆಸ್ಸಿನ ಕೆಲವರು ಜನಸಂಘದ ಕಪಿಮುಷ್ಠಿಯಲ್ಲಿರುವ ಜನತಾಪಕ್ಷದಲ್ಲಿಯೇ ಉಳಿದುಕೊಂಡಿದ್ದಾರೆ.

ಈ ಎರಡೂ ಮುಖ್ಯ ಬಣಗಳನ್ನೂ ವಿರೋಧಿಸಿ ನಿಂತಿರುವವರು ಜನತಾ (ಎಸ್)ನವರು. ಇವರ ಸಮರ ಸರ್ವಾಧಿಕಾರಿಗಳ ವಿರುದ್ಧವೂ ಆಗಿದೆ, ಕೋಮುವಾದಿಗಳ ವಿರುದ್ಧವೂ ಆಗಿದೆ.

ಮುಂದಿನ ಡಿಸೆಂಬರ್‌ನಲ್ಲಿ ನಡೆಯುತ್ತಿರುವ ಪಾರ್ಲಿಮೆಂಟ್ ಚುನಾವಣೆಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ರಾಷ್ಟ್ರಕ್ಕೆ ತಮ್ಮದೇ ಆದ ಒಂದು ಪರ್ಯಾಯವನ್ನು ಕೊಡಲು ಈಗಲೂ ನಿಶ್ಶಕ್ತರಾಗಿದ್ದಾರೆ. ಆದ್ದರಿಂದ ಈ ಮೇಲಣ ಮೂರು ಬಣಗಳಲ್ಲಿ ಯಾವುದು ತಮಗೆ ಬೇಕೆಂಬುದನ್ನು ಜನತೆಯು ಆರಿಸಿಕೊಳ್ಳಬೇಕಾಗಿದೆ.

ಜನತಾ(ಎಸ್) ಬಣವನ್ನು ಆಯ್ಕೆಮಾಡಿ:

ಸರ್ವಾಧಿಕಾರಿಗಳ - ಕೋಮುವಾದಿಗಳ ವಿರುದ್ಧ ನಿಲುವು ತೆಗೆದುಕೊಂಡಿರುವ ಜನತಾ(ಎಸ್) ಮತ್ತು ಕಾಂಗ್ರೆಸ್

ಮೈತ್ರಿಕೂಟವನ್ನು ಆಯ್ಕೆಮಾಡಿಕೊಳ್ಳಿ ಎಂದು ಜನತೆಗೆ ಕರೆ ನೀಡುವುದರಲ್ಲಿ ಸಿ.ಪಿ.ಐ.(ಎಂ) ಹಿಂದೇಟು ಹಾಕುವುದಿಲ್ಲ. ನಮ್ಮಂತೆಯೇ ಬೇರೆ ಕೆಲವು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೂ ಜನತಾ(ಎಸ್)ಕಾಂಗ್ರೆಸ್ ಮೈತ್ರಿಕೂಟವನ್ನೇ ತಮ್ಮ ತತ್‌ಕ್ಷಣದ ಸ್ನೇಹಿತರೆಂದು ಪರಿಗಣಿಸಿದ್ದಾರೆಂಬುದು ಇಲ್ಲಿ ಸಂತೋಷದಿಂದ ಗಮನಿಸಬೇಕಾದ ಸುದ್ದಿ.

ಈ ಮೈತ್ರಿಕೂಟದ ವರ್ಗಗುಣ ಮತ್ತು ವರ್ಗಮಿತಿಗಳ ಬಗ್ಗೆ ಸಿ. ಪಿ. ಐ. (ಎಂ)ಗೆ ಸಾಕಷ್ಟು ಎಚ್ಚರವಿದೆ. ಈ ಮೈತ್ರಿಕೂಟದಲ್ಲಿನ ಅನೇಕರು, ಹಿಂದೆ ಸರ್ವಾಧಿಕಾರಿ ಕಾಂಗ್ರೆಸ್ಸಿನ ಅಥವ ಆನಂತರದ ಜನತಾಪಕ್ಷದಲ್ಲಿದ್ದವರೇ ಆಗಿದ್ದಾರೆ. ಆದ್ದರಿಂದ ಇವರನ್ನು ಜನತೆ ಮತ್ತೆ ಆರಿಸಿಕಳುಹಿಸಿದಾಗ ಇವರೆಂತಹ ನೀತಿಗಳನ್ನು ಅನುಸರಿಸುತ್ತಾರೆ ಎಂಬುದರ ಬಗ್ಗೆ ಎಲ್ಲ ವಾಮಪಂಥೀಯರಿಗೂ ಸ್ಪಷ್ಟತೆ ಇರಬೇಕು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಇಲ್ಲಿ ಎರಡು ಅಂಶಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತದೆ. 1. ಜನತಾ (ಎಸ್) ಮತ್ತು ಕಾಂಗ್ರೆಸ್ ಮೈತ್ರಿಕೂಟವು ಸರ್ವಾಧಿಕಾರಿ ಮತ್ತು ಕೋಮುವಾದಿ ಎಂಬ ನಮ್ಮ ಎರಡು ಮಹಾ ಅನಿಷ್ಟಗಳ ವಿರುದ್ಧ ಸಮರ ಸಾರಿದ್ದಾರೆ. 2. ಇವರನ್ನು ಸೋಲಿಸಿದರೆ ದುಡಿಯುವ ವರ್ಗಗಳ ಸಂಘಸಂಸ್ಥೆಗಳಿಗೆ ಬಹಳ ಲಾಭವಾಗುತ್ತದೆ. ಆ ಅನಿಷ್ಟ ಶಕ್ತಿಗಳನ್ನು ಸೋಲಿಸುವುದು ದುಡಿಯುವ ವರ್ಗಗಳ ಕರ್ತವ್ಯವೂ ಆಗಿದೆ. ಆದ್ದರಿಂದ ತತ್‌ಕ್ಷಣದಲ್ಲಿ ನಾವು ಜನತಾ (ಎಸ್) ಮತ್ತು ಕಾಂಗ್ರೆಸ್‌ನೊಡನೆ ಸಹಕರಿಸುವುದು ನಮ್ಮ ಈ ಕ್ಷಣದ ಜವಾಬ್ದಾರಿಯಾಗಿದೆ. ಈ ಮೈತ್ರಿಕೂಟ ಗೆಲ್ಲುವಂತೆ ಮಾಡುವುದೂ ನಮ್ಮ ಜವಾಬ್ದಾರಿ. ಆದರೆ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಾಪಾಡಿಕೊಂಡು ಬರಬೇಕು ಮತ್ತು ಮೈತ್ರಿಕೂಟದ ಬಗ್ಗೆ ಕಟು ವಿಮರ್ಶಾತ್ಮಕ ಧೋರಣೆಯನ್ನು ಇಟ್ಟುಕೊಳ್ಳಬೇಕು. ದೇಶವನ್ನು ಅಧೋಗತಿಗೆ ತಂದ ಕಾಂಗ್ರೆಸ್ ಮತ್ತು ಜನತಾಪಕ್ಷದ ಆರ್ಥಿಕ ನೀತಿಗಳ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ದೇಶದುದ್ದಕ್ಕೂ ಮುಂಬರುವ ಚುನಾವಣೆಗಳಲ್ಲಿ ಪ್ರಚಾರ ಮಾಡುತ್ತದೆ. ಈ ಸಮಯದಲ್ಲೇ ಎಲ್ಲ ವಾಮಪಂಥೀಯ ಪಕ್ಷಗಳನ್ನು ಮತ್ತು ಗುಂಪುಗಳನ್ನು ಒಂದು ಕಡೆ ಸೇರಿಸಲು ಅದು ಪ್ರಯತ್ನಿಸುತ್ತದೆ.

ಈ ಕಾರ್ಯದಲ್ಲಿ ಬರುವ ಅಡ್ಡಿ ಆತಂಕ–ಕಷ್ಟಕಾರ್ಪಣ್ಯಗಳ ಬಗ್ಗೆ ಸಿ. ಪಿ. ಐ. (ಎಂ)ಗೆ ಸಾಕಷ್ಟು ಪ್ರಜ್ಞೆ ಇದೆ. ಯಾವುದೇ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎಲ್ಲ ವಾಮಪಂಥೀಯರು ಒಂದು ಕಡೆ ಸೇರುವಂತೆ ನಾವು ಪ್ರಯತ್ನಿಸುತ್ತೇವೆ. ಕಾಂಗ್ರೆಸ್ (ಐ) ಪಕ್ಷದೊಂದಿಗೆ ನಮಗೆ ಯಾವ ಸಂಬಂಧವೂ ಇರುವುದಿಲ್ಲ ಎಂದು ಹೇಳಿರುವ ಬಲಕಮ್ಯುನಿಸ್ಟ್ ಪಕ್ಷದ ನಾಯಕತ್ವದ ಮಾತುಗಳನ್ನು ನಾವು ಗಮನಿಸಿದ್ದೇವೆ. ಈ ಬೆಳವಣಿಗೆ ಸ್ವಾಗತಾರ್ಹ. ಅವರ ಮಾತುಗಳು ಕೃತಿಗಿಳಿದರೆ ಎಡಶಕ್ತಿಗಳ ಒಗ್ಗೂಡುವಿಕೆಯಲ್ಲಿ ಅದೊಂದು ಮೈಲಿಗಲ್ಲು.

ಕೃತಿಯಲ್ಲಿ ಬೇರೆ :

ಕಾಂಗ್ರೆಸ್ (ಐ)ನೊಡನೆ ಸಂಬಂಧ ಇರುವುದಿಲ್ಲ ಎಂದು ಸಿ. ಪಿ. ಐ. ಕೇರಳದ ಪಂಚಾಯತ್ ಚುನಾವಣೆಗಳಲ್ಲಿ ಅದು ಕಾಂಗ್ರೆಸ್ (ಐ)ನೊಡನೆ ಸಖ್ಯತೆ ಮಾಡಿಕೊಂಡಿದೆ. ಅಸ್ಸಾಂನಲ್ಲಿ ಹೊಸ ಸರ್ಕಾರ ರಚಿಸುವಲ್ಲಿ ಸಿ. ಪಿ. ಐ.-ಕಾಂಗ್ರೆಸ್ (ಐ) ಜೊತೆಗೂಡಿವೆ. ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ವಾಮಪಂಥೀಯರ ಐಕ್ಯತೆಗೆ ಭಂಗ ತಂದಿದ್ದ ಸಿ. ಪಿ. ಐ. ಅದನ್ನು ರಿಪೇರಿ ಮಾಡಲು ಯಾವ ಪ್ರಯತ್ನವನ್ನೂ ಮಾಡಿಲ್ಲ. ಪ್ರಸ್ತುತದಲ್ಲಿ ಕೇರಳದಲ್ಲಿರುವ ಮಾರ್ಕ್ಸ್‌ವಾದಿ ವಿರೋಧಿ ಸಂಯುಕ್ತ ಸರ್ಕಾರವನ್ನು ವಿಸರ್ಜಿಸಿ ಲೋಕಸಭಾ ಚುನಾವಣೆಗಳ ಜೊತೆಗೇ ಕೇರಳ ವಿಧಾನಸಭೆಗೂ ಚುನಾವಣೆ ನಡೆಸಲು ಒಪ್ಪುತ್ತೇವೆಂದು ಸಿ. ಪಿ. ಐ.ನ ನ್ಯಾಷನಲ್ ಕೌನ್ಸಿಲ್ ಹೇಳಿದರೂ ಅದರ ಕೇರಳ ಘಟಕ ಅದಕ್ಕೆ ವಿರೋಧ ತೋರಿಸುತ್ತಿದೆ.

ಮುಂಬರುವ ದಿವಸಗಳಲ್ಲಿನ ಪರಿಸ್ಥಿತಿಯು ಒತ್ತಡಕ್ಕೆ ಮಣಿದು ಕೇರಳದ ಪ್ರಸ್ತುತ ಸರ್ಕಾರದ ವಿಸರ್ಜನೆಯಾಗುತ್ತದೆ. 1969ರಲ್ಲಿ ಆದ ಭಂಗದ ರಿಪೇರಿಯಾಗಿ ವಾಮಪಂಥೀಯ ಶಕ್ತಿಗಳು ಒಗ್ಗೂಡುತ್ತವೆ ಎಂದು ಮಾತ್ರ ಆಶಿಸಬೇಕಾಗಿದೆ. ಪಶ್ಚಿಮ ಬಂಗಾಳದಲ್ಲಿ ಕೂಡ ಸಿ. ಪಿ. ಐ. ನವರು ಅಲ್ಲಿನ ಎಡರಂಗ ಸರ್ಕಾರಕ್ಕೆ ಶತೃತ್ವ ತೋರದೆ ಸಹಕಾರ ಕೊಡುತ್ತಾರೆ ಎಂಬುದನ್ನು ಆಶಿಸಬೇಕಾಗಿದೆ.

ದೇಶದ ಎದುರಿಗೆ ಇರುವ ಸರ್ವಾಧಿಕಾರಿ ಹಾಗೂ ಕೋಮುವಾದಿ ಅವಳಿ ಅಪಾಯಗಳ ಬಗ್ಗೆ ಎಲ್ಲ ವಾಮಪಂಥೀಯರು ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಎಚ್ಚರದಿಂದಿರಬೇಕೆಂದು ಸಿ. ಪಿ. ಐ. (ಎಂ) ಎಲ್ಲರಲ್ಲಿ ಮನವಿ ಮಾಡುತ್ತದೆ. ಈ ಎರಡು ಅಪಾಯಕಾರಿ ಶಕ್ತಿಗಳು ಬೆಳೆದರೆ ಅದು ಜನತಾಂತ್ರಿಕ, ಪ್ರಗತಿಪರ ಮತ್ತು ಜಾತ್ಯಾತೀತ ಶಕ್ತಿಗಳಿಗೆ ಒಂದು ಭಾರಿ ಪೆಟ್ಟು ಬಿದ್ದಂತೆಯೇ ಸರಿ. ಆದ್ದರಿಂದ ಜನಸಮುದಾಯದ ಆಶೋತ್ತರಗಳ ಈಡೇರಿಕೆಗಾಗಿ ಸರ್ವಾಧಿಕಾರಿ-ಕೋಮುವಾದಿ ಶಕ್ತಿಗಳನ್ನು ಸೋಲಿಸುವುದು ಬಹು ಪ್ರಾಮುಖ್ಯವಾದುದಾಗಿದೆ.

ಜನತಾಪಕ್ಷದ ಒಳಗೆ ಜಗಜೀವನ್ ರಾಮ್ ನೇತೃತ್ವದ ಕೆಲವು ಸಿ.ಎಫ್.ಡಿ. ನಾಯಕರು, ಹಿಂದಿನ ಯಂಗ್‌ಟರ್ಕ್ ನಾಯಕರುಗಳು ಹಾಗೂ ಕೆಲವು ಸಂಸ್ಥಾ ಕಾಂಗ್ರೆಸ್ಸಿಗರು ಇರುವುದನ್ನು ನಮ್ಮ ಕೇಂದ್ರ ಸಮಿತಿ ಗಮನಿಸಿದೆ. ಇವರನ್ನು ಆರ್.ಎಸ್.ಎಸ್. ಪ್ರಭಾವದಿಂದ ಹೊರಗೆಳೆದು ಆರ್.ಎಸ್.ಎಸ್. ಅನ್ನು ಮೂಲೆಗುಂಪು ಮಾಡುವುದೂ ಎಲ್ಲ ಪ್ರಗತಿಪರರ ಕೆಲಸ. ಹಾಗೆಯೇ ಕಾಂಗ್ರೆಸ್ (ಐ) ಪಕ್ಷದಲ್ಲಿಯೂ ಕೆಲವು ಪ್ರಗತಿಗಾಮಿಗಳಿದ್ದಾರೆ. ಇಂದಿರಾ ಮತ್ತು ಆಕೆಯ ದುಷ್ಟಕೂಟವನ್ನು ಬಹಳಕಾಲ ಇವರು ಸಹಿಸಲಾರರು. ಈ ಪ್ರಗತಿಪರ ಶಕ್ತಿಗಳನ್ನೂ ಗೆದ್ದು ಸರ್ವಾಧಿಕಾರಿ ಇಂದಿರಾ ಮತ್ತು ಆಕೆಯ ದುಷ್ಟಕೂಟವನ್ನು ಮೂಲೆಗುಂಪುಮಾಡುವುದು ಎಲ್ಲ ಪ್ರಗತಿಪರರ ಕೆಲಸವಾಗಬೇಕು.

ದೇಶದ ರಾಜಕೀಯ ಪರಿಸ್ಥಿತಿಯನ್ನು ಈ ಮೇಲಿನಂತೆ ವಿಶ್ಲೇಶಿಸಿರುವ ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯು ತನ್ನ ರಾಜ್ಯ ಘಟಕಗಳಿಗೆಆದೇಶನೀಡಿ ವಿಭಿನ್ನ ರಾಜಕೀಯ ಪಕ್ಷಗಳೊಂದಿಗೆ ಮಾತುಕತೆ ನಡೆಸಲು ಹೇಳಿದೆ. ಎಲ್ಲ ರಾಜ್ಯಘಟಕಗಳ ಸಮಿತಿಗಳೂ ಸರ್ವಾಧಿಕಾರಿ-ಕೋಮುವಾದಿ ಶಕ್ತಿಗಳ ಸೋಲಿನ ಕಡೆ ಶ್ರಮಿಸಬೇಕು. ವಾಮಪಂಥೀಯ ಶಕ್ತಿಗಳು ಈ ಸಲದ ಸಂಸತ್ತಿನಲ್ಲಿ ಹೆಚ್ಚು ಪ್ರಾತಿನಿಧ್ಯಗಳಿಸುವಂತೆ ಮಾಡಬೇಕು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಹೆಚ್ಚು ಸ್ಥಾನಗಳು ಸಿಕ್ಕುವಂತೆ ಮಾಡಿ ಅದನ್ನು ಪ್ರಭಲಗೊಳಿಸಬೇಕು.

●

ದೆಹಲಿ ವಿಶ್ವವಿದ್ಯಾನಿಲಯ ಅದ್ಯಾಪಕರ ಸಂಘದ ಚುನಾವಣೆ

ಎಡ ಒಕ್ಕೂಟದ ಅಭ್ಯರ್ಥಿಯ ಜಯಭೇರಿ

ದೆಹಲಿ ವಿಶ್ವವಿದ್ಯಾನಿಲಯ ಅದ್ಯಾಪಕರ ಸಂಘದ (ಡಿ. ಯು. ಟಿ. ಎ.) ಅಧ್ಯಕ್ಷ ಪದವಿಗಾಗಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ವಾಮಪಂಥೀಯ ಒಕ್ಕೂಟದ ಅಭ್ಯರ್ಥಿ ಜಹೂರ್ ಸಿದ್ಧಿಕಿ ಅವರು ಆರ್. ಎಸ್. ಎಸ್. ನ ಇಂದರ್ ಕಪಾಹಿ ಹಾಗೂ ನ್ಯಾಶನಲ್ ಫೋರಂ ಆಫ್ ಟೀಚರ್ಸ್ (NFT)ನ ಉಮೇದ್ವಾರ ಎಚ್. ಪಿ. ಸೂದ್ ಅವರನ್ನು ಸೋಲಿಸಿ ಪ್ರಚಂಡ ಬಹುಮತದಿಂದ ಆಯ್ಕೆಯಾಗಿದ್ದಾರೆ. ಕಳೆದ ಆರು ವರ್ಷಗಳಿಂದ ದೆಹಲಿ ವಿಶ್ವವಿದ್ಯಾನಿಲಯ ಅದ್ಯಾಪಕರ ಸಂಘದ ಮೇಲೆ ಆರ್. ಎಸ್. ಎಸ್. ಹೊಂದಿದ್ದ ಆಧಿಪತ್ಯ ಇದೀಗ ತೊಲಗಿದಂತಾಗಿದೆ. ವಿಶ್ವವಿದ್ಯಾನಿಲಯದ 4500 ಅದ್ಯಾಪಕರಲ್ಲಿ 3207 ಮಂದಿ ಮತದಾನ ಮಾಡಿದ್ದು ಜಹೂರ್ ಸಿದ್ಧಿಕಿ ಅವರಿಗೆ 1126 ಮತಗಳೂ ಆರ್.ಎಸ್.ಎಸ್. ಮತ್ತು ಎನ್. ಎಫ್. ಟಿ. ಯ ಅಭ್ಯರ್ಥಿಗಳಿಗೆ ಅನುಕ್ರಮವಾಗಿ 943 ಮತ್ತು 896 ಮತಗಳು ಮಾತ್ರ ಲಭಿಸಿವೆ.

ವಿಶ್ವವಿದ್ಯಾನಿಲಯದ ಕಾರ್ಯಕಾರಿ ಸಮಿತಿಗಾಗಿ ಆಯ್ಕೆಯಾದ 15 ಸ್ಥಾನಗಳಲ್ಲಿ ಎಡ ಒಕ್ಕೂಟದ ಬೆಂಬಲ ಪಡೆದ ಐವರು ಉಮೇದ್ವಾರರಲ್ಲಿ ಭಗವತೀ ಪ್ರಸಾದ್ ಶರ್ಮಾ, ಪೃಥ್ವಿಂದರ್ ಗ್ರೇವಾಲ್, ಎಸ್.ಡಿ. ಸಿದ್ಧಿಕಿ ಮತ್ತು ಎಸ್. ಕೆ. ಜೋಶಿ, ಈ ನಾಲ್ವರು ಜಯಗಳಿಸಿದ್ದಾರೆ. ಇವರೊಂದಿಗೆ ಆಯ್ಕೆಯಾದ ಆರುಮಂದಿ ಪಕ್ಷೇತರ ಅಭ್ಯರ್ಥಿಗಳೂ ಎಡ ಹಾಗೂ ಪ್ರಜಾಸತ್ತಾತ್ಮಕ ರಂಗದೊಂದಿಗೆ ಸಹಕರಿಸಿ ಕಾರ್ಯವೆಸಗುವರೆಂದು ನಿರೀಕ್ಷಿಸಲಾಗಿದೆ. ಆರ್. ಎಸ್. ಎಸ್. ಐವರು ಹುರಿಯಾಳುಗಳನ್ನು ನಿಲ್ಲಿಸಿದ್ದು ಇವರಲ್ಲಿ ಇಬ್ಬರು, ಎನ್. ಎಫ್. ಟಿ. ಯ ನಾಲ್ವರು ಉಮೇದ್ವಾರರಲ್ಲಿ ಇಬ್ಬರು ಮತ್ತು ಸಿ. ಪಿ. ಐ.ನ ಒಬ್ಬರು ಅಭ್ಯರ್ಥಿ ಮಾತ್ರ ಆರಿಸಿ ಬಂದಿದ್ದಾರೆ.

ಅದ್ಯಾಪಕರ ಪ್ರಜಾಸತ್ತಾತ್ಮಕರಂಗ ಹಾಗೂ ಇತರ ಎಡ ಮತ್ತು ಪ್ರಜಾಪ್ರಭುತ್ವವಾದಿ ವ್ಯಕ್ತಿಗಳು ಮತ್ತು ಗುಂಪುಗಳನ್ನೊಳಗೊಂಡ ಎಡ ಪ್ರಜಾಸತ್ತಾತ್ಮಕ ರಂಗವನ್ನು ಚುನಾವಣೆಗೆ ಮೊದಲು ರಚಿಸಲಾಗಿದ್ದು ಕೋಮುವಾದವನ್ನೂ, ಸರ್ವಾಧಿಕಾರಿ ಪ್ರವೃತ್ತಿಯನ್ನೂ ವಿರೋಧಿಸುವುದೇ ಈ ರಂಗದ ಮುಖ್ಯ ಚುನಾವಣಾ ಘೋಷಣೆಯಾಗಿತ್ತು. ಅದ್ಯಾಪಕರ ಆರ್ಥಿಕ ಬೇಡಿಕೆಗಳ ಈಡೇರಿಕೆಗಾಗಿ ಅವರನ್ನು ಸಂಘಟಿಸಿ ಹೋರಾಡುವುದು ಮಾತ್ರವಲ್ಲದೆ ಅವರು ದೇಶದ ಪ್ರಜಾಸತ್ತಾತ್ಮಕ ಚಳುವಳಿಯಿಂದ ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂಬುದನ್ನು ಎಡ ಪ್ರಜಾಪ್ರಭುತ್ವವಾದಿ ರಂಗವು ಒತ್ತಿ ಹೇಳಿತ್ತು. ಇದಕ್ಕೆ ವಿರುದ್ಧವಾಗಿ ಆರ್.ಎಸ್.ಎಸ್ ಮತ್ತು ಎನ್ ಎಫ್. ಟಿ.ಗಳು ಅದ್ಯಾಪಕರಿಗೆ ಯಾವುದೇ ರಾಜಕೀಯ ಸಿದ್ಧಾಂತ ಸಲ್ಲದು ಎಂಬ ನಿಲುಮೆಯಮೇಲೆ ತಮ್ಮ ಚುನಾವಣಾ ಪ್ರಚಾರವನ್ನು ನಡೆಸಿದ್ದವು. ಕಾಂಗ್ರೆಸ್ (ಎಸ್) ಮತ್ತು ಕಾಂಗ್ರೆಸ್(ಐ) ಹಿಡಿತದಲ್ಲಿರುವ ಎನ್.ಎಫ್.ಟಿ. ಯಂತೂ ಕೊನೆಗೂ ಸರ್ವಾಧಿಕಾರಿ ಶಕ್ತಿಗಳಿಂದ ಬಿಡುಗಡೆ ಹೊಂದಲು ಸಿದ್ಧವಿರಲಿಲ್ಲ. ಇನ್ನೊಂದೆಡೆ ಸಿ.ಪಿ.ಐ. ಮುಂದಾಳುಗಳು ಆರೆಸ್ಸೆಸ್ಸನ್ನು ವಿರೋಧಿಸುವ ಆತುರದಲ್ಲಿ ಎನ್.ಎಫ್.ಟಿ.ಯ ಜೊತೆಗೂಡಿ ಎಡ ಪ್ರಜಾಸತ್ತಾತ್ಮಕ ರಂಗವನ್ನು ವಿರೋಧಿಸಿದರು. ಆರೆಸ್ಸೆಸ್ ಮತ್ತು ಎನ್.ಎಫ್.ಟಿ. ಇವೆರಡೂ ಈ ಚುನಾವಣೆಯಲ್ಲಿ ಸೋತಿರುವುದು ಕೋಮುವಾದಿಗಳನ್ನು ಎದುರಿಸಲು ಸರ್ವಾಧಿಕಾರಿ ಶಕ್ತಿಗಳ ಜೊತೆಗೂಡುವ ಸಿ.ಪಿ.ಐ.ನ ಧೋರಣೆ ತಪ್ಪೆಂಬುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ.

ಕೋಮುವಾದಿ ಹಾಗೂ ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸುವ ಮೂಲಕ ದೆಹಲಿ ವಿಶ್ವವಿದ್ಯಾನಿಲಯದ ಅದ್ಯಾಪಕರು ತಮ್ಮ ಉನ್ನತಮಟ್ಟದ ರಾಜಕೀಯ ತಿಳುವಳಿಕೆಯನ್ನು ಪ್ರದರ್ಶಿಸಿದ್ದಾರೆ; ಅದ್ಯಾಪಕರ ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯವನ್ನು ಛಿದ್ರಗೊಳಿಸಲುಪ್ರಯತ್ನಿಸಿದ ಸಿ.ಪಿ.ಐ.ಗೂ ತಕ್ಕ ಪಾಠ ಕಲಿಸಿದ್ದಾರೆ. ಅದ್ಯಾಪಕರ ಸಂಘವು ಮತ್ತೊಮ್ಮೆ ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ನೇತೃತ್ವದಡಿ ಬಂದಿರುವುದು ದೆಹಲಿ ಅದ್ಯಾಪಕರ ಚಳುವಳಿಗೆ ಉತ್ತೇಜನ ನೀಡುವುದೆಂದೂ ನಿರೀಕ್ಷಿಸಲಾಗಿದೆ.

●

ಕೋಲಾರ ಜಿಲ್ಲಾ ರೈತ ಸಂಘದ ನಿರ್ಣಯಗಳು

ಸೆ. 9-10 ರಂದು ಶಿಡ್ಲಘಟ್ಟದಲ್ಲಿ ನಡೆದ ಕೋಲಾರಜಿಲ್ಲಾ ರೈತ ಸಂಘದ ನಿರ್ಣಯಗಳನ್ನು ವಿವರವಾಗಿ ಕೊಡಲಾಗಿದೆ.

1. ಜಿಲ್ಲೆಯಲ್ಲಿನ ಭೂಹೀನರಿಗೆ, ದಲಿತರಿಗೆ ಗೋಮಾಳ, ಸರ್ಕಾರಿ ಬಂಜರು ಜಮೀನುಗಳನ್ನು, ಮತ್ತು ಫಾರೆಸ್ಟ್ (ಅರಣ್ಯ) ಜಮೀನುಗಳನ್ನು ಹಂಚಬೇಕು, ದರಖಾಸ್ತು ಅರ್ಜಿಗಳು ವಿಳಂಬವಿಲ್ಲದೆ ತೀರ್ಮಾನವಾಗಬೇಕು.

2. 10 ಎಕರೆ ಖುಷ್ಕಿ 5 ಎಕರೆ ತರಿ, ಭಾಗಾಯ್ತು ಹಿಡುವಳಿ ಜಮೀನುಗಳಿಗೆ ಕಂದಾಯ ರದ್ದಾಗಬೇಕು.

3. ವಸತಿ ಹೀನರಿಗೆ ಖಾಲಿ ನಿವೇಶನಗಳನ್ನು ತುರ್ತಾಗಿ ಹಂಚಬೇಕು.

4. ಹರಿಜನ ಗಿರಿಜನ ಪರಬಾರೆ ಜಮೀನುಗಳನ್ನು ಅವರಿಗೆ ಪುನಃ ವಾಪಸ್ಸು ಕೊಡಿಸಲು ತುರ್ತು ಕಾರ್ಯಕ್ರಮ ಕೈಗೊಳ್ಳಬೇಕು.

ಇನಾಂ ರದ್ದಿಯಾತಿಯಲ್ಲಿ ಬಡವರ ಕೈತಪ್ಪಿರುವ ಜಮೀನುಗಳು ತುರ್ತಾಗಿ ಅವರಿಗೆ ಹಿಂತಿರುಗುವಂತಾಗಬೇಕು.

5. ಬ್ಯಾಂಕ್, ಸಹಕಾರ ಸಂಘಗಳಲ್ಲಿ ಜಾಮೀನಿಲ್ಲದೆ ಬಡವರಿಗೆ ಲೋನ್ ಸಿಗುವಂತಾಗಬೇಕು.

6. ವಿದ್ಯಾವಂತ ನಿರುದ್ಯೋಗಿಗಳಿಗೆ ಎಲ್ಲರಿಗೂ ನಿರುದ್ಯೋಗ ಭತ್ಯ ಸಿಗಬೇಕು. ಎಲ್ಲಾ ನಿರುದ್ಯೋಗಿಗಳಿಗೆ ಅಂದರೆ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ರಿಜಿಸ್ಟರು ಮಾಡಿಸಿ

[7ನೇ ಪುಟ ನೋಡಿ]

ಆರ್ಥಿಕ ಸಮೀಕ್ಷೆ:

[3ನೇ ಪುಟದಿಂದ]

ಮಾಡಲಾಗಿದೆ. ಪೌಷ್ಟಿಕ ಆಹಾರದ ಕೊರತೆಯಿಂದಾಗಿ, ಹಳ್ಳಿಗಳಲ್ಲಿ ಪ್ರತಿ ಸಾವಿರ ಹೆರಿಗೆಗಳಲ್ಲಿ 573 ತಾಯಂದಿರು ಪ್ರತಿವರುಷ ಸಾಯುತ್ತಾರೆ. ಹುಟ್ಟಿದ ಮಕ್ಕಳಲ್ಲಿ ಶೇ. 50 ರಷ್ಟೂ 20 ವರುಷವನ್ನು ತಲುಪುವುದಿಲ್ಲ. ರಷಿಯಾದಲ್ಲಿ 1972 ರಲ್ಲಿ ಸ್ವಾಭಾವಿಕ ಮರಣ ದರವು ಪ್ರತಿ ಸಾವಿರಕ್ಕೆ 8.5; ಶಿಶು ಮರಣ ದರವು 24.7 ಮತ್ತು ಶಿಶು ಜೀವನಾವಧಿಯ ನಿರೀಕ್ಷಣೆಯು 70 ವರುಷವಾಗಿತ್ತು. 1963 ರಲ್ಲಿ ಅಮೇರಿಕದಲ್ಲಿ ಇವು ಅನುಕ್ರಮವಾಗಿ 9.6,25.2 ಮತ್ತು 70 ವರುಷ ಆಗಿದ್ದವು. 1970-75 ರಲ್ಲಿ ಚೀನಾದಲ್ಲಿ ಇವು ಅನುಕ್ರಮವಾಗಿ 10.2,18 ಮತ್ತು 61.6 ವರುಷ ಆಗಿದ್ದವು. ಭಾರತದ ಶಿಶು ಜೀವನಾವಧಿಯ ನಿರೀಕ್ಷಣೆಯು ಅದೇ ಸಮಯದಲ್ಲಿ 49.2 ವರುಷಗಳಾಗಿದ್ದು, ಆಗ್ನೇಯ ಏಷ್ಯಾದಲ್ಲಿಯೇ ಅತ್ಯಂತ ಕಡಿಮೆಯಾಗಿತ್ತು. ಗ್ರಾಮೀಣ ಭಾರತದಲ್ಲಿ ಮರಣ ದರ ಹಾಗೂ ಶಿಶು ಮರಣ ದರಗಳು ನಗರ ಕ್ಷೇತ್ರಗಳಿಗಿಂತ ಇಮ್ಮಡಿಯಾಗಿವೆ.

ಹೈದರಾಬಾದಿನ ಪೌಷ್ಟಿಕ ಆಹಾರದ ರಾಷ್ಟ್ರೀಯ ಸಂಸ್ಥೆಯ ವರದಿಯಂತೆ, ಐದು ವರುಷ ಪ್ರಾಯದ ಕೆಳಗಿನ ಒಟ್ಟು 100 ಮಿಲಿಯಕ್ಕಿಂತಲೂ ಹೆಚ್ಚಿನ ಮಕ್ಕಳಲ್ಲಿ 65 ಮಿಲಿಯ ಮಕ್ಕಳು ಪೌಷ್ಟಿಕ ಆಹಾರದ ಕೊರತೆಯಿಂದಾಗಿ ಸರ್ವಸಾಮಾನ್ಯವಾಗಿ ತೊಂದರೆಗೊಳಗಾಗಿವೆ. ಇನ್ನೂ 18 ಮಿಲಿಯ ಮಕ್ಕಳು ಅತ್ಯಂತ ದಾರುಣ ಸ್ಥಿತಿಯಲ್ಲಿವೆ. 1973 ರಲ್ಲಿ ಲೋಕ ಸಭೆಯಲ್ಲಿ ಆರೋಗ್ಯ ಮಂತ್ರಿಯ ಹೇಳಿಕೆಯೂ ಈ ಸಮೀಕ್ಷೆಯನ್ನೇ ಸಮರ್ಥಿಸುವುದು. ಆ ಹೇಳಿಕೆಯಂತೆ, ಸುಮಾರು 60 ಮಿಲಿಯ ಮಕ್ಕಳು ಅತ್ಯಂತ ಸತ್ವಹೀನವಾದ ಆಹಾರ ಸೇವಿಸುತ್ತಿದ್ದುದೇ ಅಲ್ಲದೆ ಹೆಚ್ಚಿನವುಗಳು ಆಹಾರ ಅಭಾವದಿಂದಲೇ ತೊಳಲಾಡುತ್ತಿದ್ದುವು. ಬದುಕಿ ಉಳಿದ ಮಕ್ಕಳೂ ಒಂದಲ್ಲ ಒಂದು ದೈಹಿಕ ಮತ್ತು ಮಾನಸಿಕ ನ್ಯೂನತೆಗಳಿಗೆ ಒಳಗಾಗಿರುವರು. 25 ಮಿಲಿಯ ಮಕ್ಕಳು ಕೇವಲ 75 ಪೈಸೆಯ ಚುಚ್ಚುಮದ್ದಿನ ಸೌಲಭ್ಯವೂ ಇಲ್ಲದೆ ಕುರುಡರಾಗಿದ್ದಾರೆ ದೇಶದ ಒಟ್ಟು ಕುರುಡರಲ್ಲಿ ಶೇ. 30 ರಷ್ಟು 20 ವರುಷದ ಕೆಳಗಿನ ಪ್ರಾಯದವರು. ಜಗತ್ತಿನ ಪ್ರತಿ ಐವರು ಕುರುಡರಲ್ಲಿ ಒಬ್ಬ ಭಾರತೀಯನು! ಅಂಧರ ಅತ್ಯಂತ ದೊಡ್ಡ ದೇಶ ಈಜಿಪ್ಟ್. ಎರಡನೇ ಸ್ಥಾನ ಭಾರತಕ್ಕೆ. ಇಂದಿನ ಮಕ್ಕಳೇ ಮುಂದಿನ ಜನಾಂಗವಾಗಿರುವಾಗ, ಸ್ವತಂತ್ರ ಭಾರತದ ಭವಿಷ್ಯ ಕರಳು ಕತ್ತರಿಸುವಷ್ಟು ಶೋಚನೀಯವಾಗಿದೆ.

ಆಹಾರ ಅಭಾವ ಮತ್ತು ಪೌಷ್ಟಿಕ ಆಹಾರದ ಕೊರತೆಯಿಂದಾಗಿ ದೇಶದ ಪ್ರತಿ ಮೂವರಲ್ಲಿ ಒಬ್ಬನಲ್ಲಿ ಕ್ಷಯ ರೋಗಾಣುಗಳಿವೆ. ತಜ್ಞರ ಸಮೀಕ್ಷೆಯಂತೆ, ದೇಶದ ಒಟ್ಟು ಜನಸಂಖ್ಯೆಯ ಶೇ. 40 ರಷ್ಟು ಅಂದರೆ 250 ಮಿಲಿಯ ಜನರಲ್ಲಿ ಕ್ಷಯರೋಗಾಣುಗಳಿವೆ. ಶೇ. 2 ರಷ್ಟು ಅಂದರೆ 12.50 ಮಿಲಿಯ ಜನರಿಗೆ ಕ್ಷಯರೋಗ ಸೋಂಕಿದೆ. ಮತ್ತು ಅವರಲ್ಲಿ ಮೂರು ಮಿಲಿಯಕ್ಕೂ ಹೆಚ್ಚಿನ ಜನರು ಕ್ಷಯರೋಗದಿಂದ ನರಳುತ್ತಿದ್ದಾರೆ. ಭಾರತದಲ್ಲಿ ಕ್ಷಯರೋಗದಿಂದಲೇ ಸಾಯುವವರ ಸಂಖ್ಯೆಯು ಪ್ರಪಂಚದ ಎಲ್ಲಾ ರಾಷ್ಟ್ರಗಳಿಗಿಂತಲೂ ಅತ್ಯಧಿಕವಾಗಿದೆ. ಇಲ್ಲಿ ಪ್ರತಿ ಒಂದು ಲಕ್ಷ ಜನರಲ್ಲಿ 70 ರಿಂದ 90 ರಷ್ಟು ಜನರು ಕ್ಷಯರೋಗದಿಂದ ಸಾಯುವರು. ಲ್ಯಾಟಿನ್ ಅಮೇರಿಕಾ ಮತ್ತು ಏಷ್ಯಾದ ಇತರ ದೇಶಗಳಲ್ಲಿ ಈ ಸಂಖ್ಯೆಯು 30 ರಿಂದ 40 ರಷ್ಟಾದರೆ, ಅಮೇರಿಕ ರಷ್ಯಾ ಮುಂತಾದ ಮುಂದುವರಿದ ರಾಷ್ಟ್ರಗಳಲ್ಲಿ ಇದು 5 ಕ್ಕಿಂತಲೂ ಕಡಿಮೆಯಾಗಿದೆ. ಕ್ಷಯರೋಗವು ದೇಶದ ಜನರ ಅಕಾಲಿಕ ಸಾವಿಗೆ ಏಕೈಕ ದೊಡ್ಡ ಕಾರಣವಾಗಿದೆ.

ಮಲೇರಿಯಾ ರೋಗವು 1975 ರಲ್ಲಿ ಸಂಪೂರ್ಣ ನಿವಾರಣೆಯ ಹಂತದಲ್ಲಿರುವಾಗ, ಸರಕಾರದ ಗಮನವು ಜನರ ಆರೋಗ್ಯ ಮತ್ತು ರೋಗ ನಿವಾರಕ ಕಾರ್ಯಕ್ರಮಗಳಿಗಿಂತ ಜನಸಂಖ್ಯೆಯ ನಿಯಂತ್ರಣದತ್ತ ಹೆಚ್ಚು ಹರಿಯತೊಡಗಿತು. ಪರಿಣಾಮವಾಗಿ ಮಲೇರಿಯ ರೋಗವು ದೇಶದಲ್ಲಿ ಪುನಃ ಮಹಾಮಾರಿಯಾಗಿ ತಲೆದೋರಿದೆ. 1974 ಮತ್ತು 1975 ರಲ್ಲಿ ಅನುಕ್ರಮವಾಗಿ 2 ಮಿಲಿಯ ಮತ್ತು 3-4 ಮಿಲಿಯ ಜನರಿಗೆ ಈ ರೋಗ ತಗಲಿದೆ ಎಂದು ತಿಳಿದು ಬಂದಿದೆ. ಸಿಡುಬು ರೋಗವೂ ಒಂದೊಮ್ಮೆ ಸಂಪೂರ್ಣ ನಿವಾರಣೆಯಾಗಿದ್ದರೂ 1970ರ ದಶಕದಲ್ಲಿ ಪುನಃ ಬೃಹತ್ ಪ್ರಮಾಣದಲ್ಲಿ ಜನರನ್ನು ಭಾದಿಸುತ್ತಿದೆ. 1973 ರಲ್ಲಿ 87509 ಜನರು ಈ ರೋಗಕ್ಕೆ ತುತ್ತಾಗಿ, 15348 ಜನರು ಸಾವಿಗೀಡಾದರೆಂದು ಸರಕಾರಿ ದಾಖಲೆಗಳಿಂದ ತಿಳಿದು ಬಂದಿದೆ. ಇದು ಈ ಶತಮಾನದಲ್ಲಿಯೇ ಅತ್ಯಂತ ದೊಡ್ಡ ದಾಖಲೆಯಾಗಿದೆ! 1974ರ ಮೊದಲ ಭಾಗದಲ್ಲಿ ಈ ರೋಗವು ಪುನಃ 61482 ಜನರಿಗೆ ತಗಲಿ, 15,000 ಕ್ಕಿಂತಲೂ ಹೆಚ್ಚು ಜನರು ಸಾವಿಗೀಡಾದರು. ಈ ಅವಧಿಯಲ್ಲಿ ಜಗತ್ತಿನಾದ್ಯಂತ ಸಿಡುಬಿಗೆ ತುತ್ತಾದವರ ಒಟ್ಟು ಸಂಖ್ಯೆ 76383. ಇವರಲ್ಲಿ ಶೇ. 80ಕ್ಕಿಂತಲೂ ಹೆಚ್ಚು ಭಾರತದ ಜನರೇ ಎಂದು ವಿಶ್ವ ಆರೋಗ್ಯ ಸಂಸ್ಥೆಯ ದಾಖಲೆಯಿಂದ ತಿಳಿದು ಬಂದಿದೆ. 1971 ರಲ್ಲಿ ಜಗತ್ತಿನ ಒಟ್ಟು 11 ಮಿಲಿಯ ಕುಷ್ಟರೋಗಿಗಳಲ್ಲಿ 3.1 ಮಿಲಿಯ ರೋಗಿಗಳು ಭಾರತದಲ್ಲಿಯೇ ಇದ್ದರು. ಕ್ಯಾನ್ಸರ್ ರೋಗವು ಭಾರತದಲ್ಲಿ ಪ್ರತಿ ಸಾವಿರ ಜನರಲ್ಲಿ ಒಬ್ಬನನ್ನು ಪೀಡಿಸುತ್ತಿದ್ದು, ಅಕಾಲಿಕ ಸಾವಿಗೆ ಇದು ನಾಲ್ಕನೇಯ ದೊಡ್ಡ ಕಾರಣವಾಗಿದೆ. 1971 ರಲ್ಲಿ ದೇಶದಲ್ಲಿ ಸಂಭವಿಸಿದ ಸಾವುಗಳಲ್ಲಿ ಸುಮಾರು ಶೇ. 50 ರಷ್ಟು ಸಾವುಗಳು ಕ್ಷಯ, ಮಲೇರಿಯಾ, ನ್ಯುಮೋನಿಯಾ, ಫ್ಲೂ, ಕೆಮ್ಮು, ಸಿಡುಬು, ಶೀತಜ್ವರ, ಗಂಟಲು ರೋಗ, ಕಾಲರಾ, ಅತಿಸಾರ ಮುಂತಾದ ಮಹಾ ರೋಗಗಳಿಂದ ಸಂಭವಿಸಿದವು.

ಭಾರತದ ಔಷಧಿ ತಯಾರಕರ ಸಂಘದ ಒಂದು ಪುರವಣಿಯಲ್ಲಿ ಪ್ರಕಟವಾದಂತೆ, 1976 ರಲ್ಲಿ ಭಾರತದಲ್ಲಿ 600 ಮಿಲಿಯಕ್ಕೂ ಹೆಚ್ಚಿನ ಜನಸಂಖ್ಯೆಗೆ ಸಿಗುವ ಆಸ್ಪತ್ರೆಯ ಹಾಸಿಗೆಗಳ ಸೌಕರ್ಯಗಳ ಒಟ್ಟು ಸಂಖ್ಯೆಯು ಕೇವಲ 2,80,000, ಅಂದರೆ ಪ್ರತಿ 2000 ಜನರಿಗೆ ಒಂದು ಹಾಸಿಗೆ. ಡಾಕ್ಟರುಗಳ ಸಂಖ್ಯೆಯು ಕೇವಲ 1,38,000, ಅಂದರೆ ಪ್ರತಿ 4000 ಜನರಿಗೆ ಒಬ್ಬ ಡಾಕ್ಟರ್. ಇವರಲ್ಲಿಯೂ ಬಹುಪಾಲು ಡಾಕ್ಟರ್‌ಗಳು ನಗರ ಪ್ರದೇಶಗಳಲ್ಲಿಯೇ ಇದ್ದು ಗ್ರಾಮೀಣ ಜನರು ಯೋಗ್ಯ ವೈದ್ಯಕೀಯ ಸೇವಾ ಸೌಲಭ್ಯಗಳಿಲ್ಲದೆ, ತಮ್ಮ ಅನಾರೋಗ್ಯಕ್ಕೆ ಅದೃಷ್ಟ ಅಂಧಶ್ರದ್ಧೆಗಳಿಗೆ ಶರಣು ಹೋಗುತ್ತಾರೆ. ಆರೋಗ್ಯ ಸಮೀಕ್ಷೆ ಮತ್ತು ಯೋಜನಾ ಸಮಿತಿ (ಮೊದಲಿಯಾರ್ ಸಮಿತಿ)ಯ ಶಿಫಾರಸಿನಂತೆ, ಕನಿಷ್ಟ 1000 ಜನರಿಗೆ ಒಂದು ಆಸ್ಪತ್ರೆ ಹಾಸಿಗೆ ಮತ್ತು 2000 ಜನರಿಗೆ ಒಬ್ಬ ಡಾಕ್ಟರ್ ಆದರೂ ಇರಬೇಕಿತ್ತು. ಈ ಗುರಿಯನ್ನು ಸಾಧಿಸಲು ನಾವು ಭಾರೀ ದೂರವಾಗಬೇಕಾದೀತು. 1975 ರಲ್ಲಿ ಭಾರತದಲ್ಲಿ ಔಷಧಿಗಳಿಗಾಗಿ ಪ್ರತಿಯೊಬ್ಬನ ವಾರ್ಷಿಕ ಸರಾಸರಿ ವೆಚ್ಚವು ರೂ.7.5 ಆಗಿತ್ತು. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಈ ವೆಚ್ಚವು ಭಾರತದ ಜನರ ಮಟ್ಟಕ್ಕಿಂತ 10ರಿಂದ 50 ಪಾಲು ಹೆಚ್ಚಿದೆ. ದೇಶದ ಜನರ ಆರೋಗ್ಯವು ಕೇವಲ ಆಸ್ಪತ್ರೆ, ಡಾಕ್ಟರ್, ಔಷಧಿ ಇವುಗಳನ್ನೇ ಹೊಂದಿರುವುದಿಲ್ಲ. ಜನರ ಆರೋಗ್ಯದಲ್ಲಿ ಪೌಷ್ಟಿಕ ಆಹಾರ, ಯೋಗ್ಯ ವಸತಿ ಮತ್ತು ಬಟ್ಟೆ, ಪರಿಸರ ನೈರ್ಮಲ್ಯ, ಕುಡಿಯಲು ನಿರ್ಮಲ ನೀರು, ಶಿಕ್ಷಣ, ವಿಶ್ರಾಂತಿ, ಮನೋರಂಜನೆ ಮುಂತಾದವುಗಳೂ ಪ್ರಾಮುಖ್ಯವಾದ ಅಂಶಗಳಾಗಿವೆ. ಇತ್ತೀಚೆಗಿನ ಜನಪ್ರಿಯ ಪತ್ರಿಕೆಗಳಲ್ಲಿ ವರದಿಯಾದಂತೆ, ಚೀನಾದೇಶದಲ್ಲಿ ಜನರ ಆರೋಗ್ಯ, ನೈರ್ಮಲ್ಯ, ಶಿಕ್ಷಣ ಮುಂತಾದವುಗಳಲ್ಲಿ ಅದ್ಭುತ ಸಾಧನೆಗಳಾಗಿವೆ. ಅಭಿವೃದ್ಧಿ ಹೊಂದಿದ ಹಾಗೂ ಹೊಂದುತ್ತಿರುವ ಬಂಡವಾಳಶಾಹಿ ರಾಷ್ಟ್ರಗಳು ಸಮಾಜವಾದಿ ರಾಷ್ಟ್ರಗಳ ಈ ಸಾಧನೆಗಳಿಂದ ಆಶ್ಚರ್ಯಗೊಂಡಿವೆ ಮತ್ತು ಆದೇಶದ ಕಾರ್ಯಕ್ರಮಗಳನ್ನು ವಿಶೇಷ ಆಸಕ್ತಿಯಿಂದ ಪರಿಶೀಲಿಸತೊಡಗಿವೆ.

ಸೋವಿಯತ್ ಯೂನಿಯನ್‌ನ ಹೊಸ ಸಂವಿಧಾನದಂತೆ, ಪ್ರತಿಯೊಬ್ಬ ನಾಗರಿಕನಿಗೂ ವಸತಿ ಸೌಕರ್ಯ ದೊರೆಯುವುದು ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ. ಆದರೆ, ಭಾರತದಲ್ಲಿ ಶೇ. 85 ರಷ್ಟು ಗ್ರಾಮೀಣ ಜನರಿಗೆ ಕುಡಿಯಲು ಶುದ್ಧ ನೀರಿನ ಆಸರೆಯೂ ಇಲ್ಲ. ಶೇ. 25 ರಷ್ಟು ಹಳ್ಳಿಯ ಜನರಿಗೆ 12 ಅಡಿ ಆಳದೊಳಗೆ ಮತ್ತು ಒಂದು ಮೈಲು ದೂರದೊಳಗೆ ನೀರು ಇನ್ನೂ ಸಿಗುವುದಿಲ್ಲ. ಮೇ 4, 1978 ಕೇಂದ್ರ ವಸತಿ ಮಂತ್ರಿ ಸಿಕಂದರ್ ಭಕ್ತ್ ರಾಜ್ಯಸಭೆಯಲ್ಲಿ ನೀಡಿದ ಹೇಳಿಕೆಯಂತೆ, ಭಾರತದ 5 ಲಕ್ಷ ಹಳ್ಳಿಗಳಿಗೆ ನೀರು ಸರಬರಾಜಿನ ಸೌಕರ್ಯಗಳಿಲ್ಲ-ಸದ್ಯ ವಸತಿ ಸೌಕರ್ಯಗಳು 1000 ಜನರಿಗೆ ಕೇವಲ 3ರಂತೆ ನಿರ್ಮಾಣವಾಗುತ್ತಿವೆ. ಏಪ್ರಿಲ್ 1974 ರಷ್ಟರಲ್ಲಿ ದೇಶದ ಪೂರೈಸಲಾಗದ ಆದರೆ ಅತ್ಯಗತ್ಯವಾದ ವಸತಿಗಳ ಸಂಖ್ಯೆಯು 15.6 ಮಿಲಿಯ. ಅವುಗಳಲ್ಲಿ 11.6 ಮಿಲಿಯ. ವಸತಿಗಳ ಕೊರತೆಯು ಗ್ರಾಮೀಣ ಪ್ರದೇಶಗಳಲ್ಲೂ ಮತ್ತು 3.8 ಮಿಲಿಯ ನಗರ ಪ್ರದೇಶಗಳಲ್ಲೂ ಆಗಿದೆ. ಇರುವ ವಸತಿಗಳಲ್ಲಿ ಶೇ. 85 ರಷ್ಟು ಕಚ್ಚಾ ಮನೆಗಳು, ಗುಡಿಸಲುಗಳು. ಅವುಗಳಿಗೆ ಮಾಡಿದ್ದರೆ ಗೋಡೆ ಇಲ್ಲ. ಗೋಡೆ ಇದ್ದರೆ ಮಾಡಿಲ್ಲ! ಗುಡಿ ಜೋಂಪಡಿಗಳಲ್ಲಿ 1-2 ಕೋಣೆಗಳಲ್ಲಿ 5-10 ಜನರು ಪಶುಗಳಂತೆ ಸರದಿ ಪ್ರಕಾರ ವಾಸಮಾಡುತ್ತಿರುವರು! ಪೇಟೆಪಟ್ಟಣಗಳಲ್ಲಿನ ಬಹುಭಾಗ ಜನರು ಕೊಳಚೆ ಪ್ರದೇಶಗಳಲ್ಲಿಯೇ ವಾಸಿಸುತ್ತಿದ್ದು ಅವುಗಳನ್ನು ನಿರ್ಮೂಲನಗೊಳಿಸಿ ಮರುವಸತಿ ಸೌಕರ್ಯ ಒದಗಿಸಿಕೊಡುವುದು ಅಸಾಧ್ಯವಾಗಿ ನಗರಾಡಳಿತಗಳು ಅವುಗಳ ನಿರ್ಮಲತೆಗಷ್ಟೇ ಗಮನಕೊಡುತ್ತಿವೆ.

[ಮುಂದುವರಿಯುವುದು]

ಹೋರಾಟದ ಫಲ: ಗೇರುಬೀಜ ಕಾರ್ಮಿಕರಿಗೆ ಕೂಲಿ ಹೆಚ್ಚಳ

ಹೊಟ್ಟೆಬಟ್ಟೆಗೂ ಸಾಲದಿರುವಷ್ಟು ಕಡಿಮೆ ದಿನಗೂಲಿಗೆ ದುಡಿಯುತ್ತಿರುವ ಮಂಗಳೂರಿನ ಗೇರು ಬೀಜ ಉದ್ಯಮದ ಕೆಲಸಗಾರರ ಹೋರಾಟಕ್ಕೆ ಪ್ರಥಮ ಯಶಸ್ಸು ದೊರೆತಿದೆ. ಕನಿಷ್ಟ ಕೂಲಿ ಜಾರಿಯಾಗುವವರೆಗೂ ಅವರಿಗೆ ತಾತ್ಕಾಲಿಕ ಪರಿಹಾರ ದೊರೆಯಲಿದೆ.

ಈ ಸೆಪ್ಟೆಂಬರ್ ಒಂದರಿಂದ 5 ರೂಪಾಯಿಗಿಂತ ಕಡಿಮೆ ದಿನಗೂಲಿ ಸಿಗುತ್ತಿರುವವರಿಗೆ ಒಂದು ರೂಪಾಯಿ ಹತ್ತು ಪೈಸೆ ಹೆಚ್ಚು ಕೂಲಿ ಸಿಗಲಿದೆ. ಜೊತೆಗೆ 5 ರೂಪಾಯಿಗಿಂತ ಹೆಚ್ಚು ದುಡಿಯುತ್ತಿರುವವರಿಗೆ ಒಂದು ರೂಪಾಯಿ ಅರವತ್ತು ಪೈಸೆ ಹೆಚ್ಚು ಸಿಗಲಿದೆ.

ಈ ಬಗ್ಗೆ ಮಾಲೀಕರ ಮತ್ತು ಕೆಲಸಗಾರರ ಪ್ರತಿನಿಧಿಗಳ ನಡುವೆ ಒಪ್ಪಂದವಾಗಿದೆ.

ಈ ಯಶಸ್ಸಿಗೆ ಕೆಲಸಗಾರರು ಮಾಡಿದ ಹೋರಾಟವೇ ಕಾರಣ. ಇವರು ಮೂರು ದಿವಸ ಬೆಳಗಿನ ಜಾವ ತಮ್ಮತಮ್ಮ ಕಾರ್ಖಾನೆಗಳ ಹತ್ತಿರ ಮಾಲೀಕರ ವಿರುದ್ಧ ಘೋಷಣೆ ಕೂಗಿದರು. "ಕನಿಷ್ಟ ಕೂಲಿ ಜಾರಿಗೆ ತನ್ನಿ ಜಾರಿಗೆ ತರುವವರೆಗೂ ತಾತ್ಕಾಲಿಕ ಪರಿಹಾರ ಕೊಡಿ" ಎಂಬ ಬ್ಯಾಡ್ಜನ್ನು ಧರಿಸಿದ್ದರು.

ಆಗಸ್ಟ್ ತಿಂಗಳಾಂತ್ಯದಲ್ಲಿ ಈ ಬೇಡಿಕೆಯನ್ನು ಈಡೇರಿಸದಿದ್ದರೆ ಮುಷ್ಕರ ಮಾಡಬೇಕಾಗುತ್ತದೆ ಎಂದು ಕೆಲಸಗಾರರು ಮಾಲೀಕರಿಗೆ ನೋಟೀಸು ಕೊಟ್ಟಿದ್ದರು. ಈ ನೋಟೀಸಿನ ಫಲವೇ ಈ ಒಪ್ಪಂದವಾಗಿದೆ. ●

ಹೋರಾಟ ನಿರತ ಕಾರ್ಮಿಕರಿಗೆ ಶಿವಮೊಗ್ಗ ಸಿ.ಐ.ಟಿ.ಯು. ಬೆಂಬಲ

ಶಿವಮೊಗ್ಗದ ಸಿ. ಐ. ಟಿ. ಯು. ಹಿತೈಷಿಗಳು ಸಭೆ ಸೇರಿ ರಾಜ್ಯಾದ್ಯಂತ ನಡೆಯುತ್ತಿರುವ ದುಡಿಯುವ ಜನರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಮುಖ್ಯವಾಗಿ, ತಲಘಟ್ಟಪುರದ 'ದೇವಿ ಕಾರಾಣಿ' ತೋಟದ ಕಾರ್ಮಿಕರ ಹೋರಾಟ, ಬೆಂಗಳೂರು ಹೋಟೆಲ್ ಕಾರ್ಮಿಕರ ಹೋರಾಟ ಮತ್ತು ದಾಂಡೇಲಿಯ ಎಲೆಕ್ಟ್ರೋಮೆಟಲರ್ಜಿಕಲ್ ಫ್ಯಾಕ್ಟರಿಯ ಹೋರಾಟಗಳಿಗೆ ಸೌಹಾರ್ದ ಸೂಚಿಸಿದರು.

ಈ ಕಾರ್ಮಿಕರ ಬೇಡಿಕೆಗಳು ನ್ಯಾಯಯುತವಾಗಿರುವುದರಿಂದ ಸರ್ಕಾರವು ಮಧ್ಯ ಪ್ರವೇಶಿಸಿ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿತು.

ಕಾಂ. ಲಕ್ಷ್ಮೀನಾರಾಯಣ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಗೆ ಕಾಂ. ಚಂದೂಕುಟ್ಟಿಯವರೂ ಹಾಜರಾಗಿದ್ದರು. ●

ಕುಂದಾಪುರದಲ್ಲಿ ರೈತರ ಸಭೆ ಸಾಲ ರದ್ಧತಿಗೆ ಒತ್ತಾಯ

ರೈತರ ಎಲ್ಲಾ ಸಾಲಗಳನ್ನು ರದ್ದು ಮಾಡಬೇಕು ಮತ್ತು ರೈತ ಬೆಳೆದ ಪದಾರ್ಥಗಳಿಗೆ ಲಾಭದಾಯಕ ಬೆಲೆ ಕೊಡಬೇಕೆಂದು ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ಸೇರಿದ್ದ ರೈತರ ಸಭೆಯಲ್ಲಿ ಸರ್ಕಾರವನ್ನು ಒತ್ತಾಯಿಸಲಾಯಿತು.

ಸೆ. 9 ರಂದು ಸೇರಿದ್ದ ಈ ರೈತ ಸಭೆಗೆ ತಾಲ್ಲೋಕಿನ ಎಲ್ಲ ಭಾಗಗಳಿಂದ ರೈತರು ಮತ್ತು ಕೃಷಿಕಾರ್ಮಿಕರು ಆಗಮಿಸಿದ್ದರು. ಆರಂಭದಲ್ಲಿ ತಾಲ್ಲೋಕು ರೈತಸಂಘದ ಕಾರ್ಯದರ್ಶಿ ಕಾಂ. ಡಿ. ಕೆ. ಶಂಕರ್ ಅವರು ಸ್ವಾಗತ ಭಾಷಣ ಮಾಡಿ ತಾಲ್ಲೋಕಿನಲ್ಲಿ ರೈತಸಂಘದ ಚಟುವಟಿಕೆಗಳನ್ನು ಸಭೆಗೆ ತಿಳಿಸಿದರು. ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕ್ ಅಧ್ಯಕ್ಷ ಕಾಂ. ಅಬ್ರಹಂ ಕರ್ಕಡ ಅವರು ರೈತ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿ ರೈತ ಚಳುವಳಿಯ ಮಹತ್ವವನ್ನು ವಿವರಿಸಿದರು.

ಬೆಲೆಏರಿಕೆಯ ವಿರುದ್ಧ ಸಭೆಯು ನಿರ್ಣಯವನ್ನು ಅಂಗೀಕರಿಸಿತು. ಬಸ್ ಪ್ರಯಾಣದಲ್ಲಿ ರಿಯಾಯಿತಿ ದರಕ್ಕಾಗಿ ಒತ್ತಾಯಿಸಿ ಚಳುವಳಿ ಹೂಡಿರುವ ವಿದ್ಯಾರ್ಥಿಗಳಿಗೆ ಸಭೆಯು ಬೆಂಬಲ ವ್ಯಕ್ತಪಡಿಸಿತು. ●

ಕೋಲಾರ ಜಿಲ್ಲಾ ರೈತ ಸಂಘದ ನಿರ್ಣಯಗಳು

[5ನೇ ಪುಟದಿಂದ]

ಕೊಂಡಿರುವ ನಿರುದ್ಯೋಗಿಗಳಿಗೆ ಪಶ್ಚಿಮ ಬಂಗಾಳ ಸರ್ಕಾರದ ರೀತಿ ಅನುಸರಿಸಿ ನಿರುದ್ಯೋಗಿ ಭತ್ಯವನ್ನು ಕೊಡುವಂತಾಗಬೇಕು.

7. ವಿದ್ಯುತ್ ದರಗಳನ್ನು ಮನೆಗಳಿಗೆ, ಪಂಪ್‌ಸೆಟ್‌ಗಳಿಗೆ ಹೆಚ್ಚಿಸಿರುವುದನ್ನು ಅರ್ಧಕ್ಕೆ ತಗ್ಗಿಸಬೇಕು. ವಿದ್ಯುಚ್ಛಕ್ತಿ ಡಿಪಾಜಿಟ್ ಹಣ ರದ್ದಾಗಬೇಕು.

8. ಭೂನ್ಯಾಯ ಮಂಡಳಿಗಳು ಆಳುವ ಪಾರ್ಟಿಯ ಸ್ವತ್ತಾಗಿ ನ್ಯಾಯ ದೊರಕದಾಗಿದೆ. ಭೂನ್ಯಾಯ ಮಂಡಳಿಗಳಲ್ಲಿ ರೈತಸಂಘಕ್ಕೆ ಪ್ರಾತಿನಿಧ್ಯ ದೊರಕಬೇಕು.

9. ವ್ಯವಸಾಯ ಸಲಕರಣೆಗಳ ಗೊಬ್ಬರಗಳ ಕೀಟನಾಶಕಗಳ ಬೆಲೆ ಕಡಿಮೆಯಾಗಬೇಕು.

10. ಜಿಲ್ಲೆಗೆ ಸರಕಾರವು ರೋಗ ರಹಿತ ರೇಷ್ಮೆ ಬಿತ್ತನೆ ಕೊಡಬೇಕು.

11. ಎಲ್ಲಾ ಗ್ರಾಮಗಳಿಗೂ, ಕುಡಿಯುವ ನೀರು ದೊರೆಯುವಂತಾಗಬೇಕು.

12. ಕೋಲಾರ ಜಿಲ್ಲೆಯಲ್ಲಿರುವ ಮುಖ್ಯ ಉದ್ಯಮವಾದ ಬಂಗಾರುಗಣಿಗಳಲ್ಲಿ ಬಂಗಾರವನ್ನು ರಾಷ್ಟ್ರೀಯ ಮಾರುಕಟ್ಟೆ ಬೆಲೆಯಲ್ಲಿ ಮಾರಿ ಅಲ್ಲಿನ ಕಾರ್ಮಿಕ ವರ್ಗಕ್ಕೆ ವೇತನಸೌಲಭ್ಯ, ಬೋನಸ್ಸು ಹೆಚ್ಚು ಕೊಡಬೇಕು. ಅಂತರರಾಷ್ಟ್ರೀಯ ಬೆಲೆಯಲ್ಲಿ ಮಾರಿ ಕಾರ್ಮಿಕ ವರ್ಗಕ್ಕೆ ಆಗಿರುವ ಅನ್ಯಾಯವು ನಿಲ್ಲಬೇಕು.

13. 1972ನೇ ವರ್ಷದಲ್ಲಿ ಜಿಲ್ಲಾ ರೈತಸಂಘದ ಆದೇಶವನ್ನು ಅನುಸರಿಸಿ ಶಿಡ್ಲಘಟ್ಟ, ಚಿಂತಾಮಣಿ ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಅರಣ್ಯ ಆಕ್ರಮಣ ಮಾಡಿರುವ ಜಮೀನುಗಳ ಪೈಕಿ ಕೆಲವು ಸ್ಥಳಗಳಲ್ಲಿ ಮಾತ್ರ ಅಳತೆಮಾಡಿ ಖಾಯಂ ಮಾಡಿದ್ದಾರೆ, ಇತರೆ ಕಡೆಗಳಲ್ಲಿ ಕೂಡಾ ಅತೆಳಮಾಡಿ ಖಾಯಂ ಮಾಡಿಕೊಡಬೇಕೆಂದು ಸಮ್ಮೇಳನ ಸರ್ಕಾರವನ್ನು ಕೋರುತ್ತದೆ. ಸಾಗುವಳಿಗೆ ಲಾಯಕ್ಕಾದ ಅರಣ್ಯ ಭೂಮಿಯನ್ನು ಸರ್ಕಾರ ಭೂಹೀನರಿಗೆ ಹಂಚದಿದ್ದರೆ ಪ್ರಾಂತ್ಯ ವ್ಯಾಪ್ತಿ ಭೂ ಆಕ್ರಮಣ ಚಳುವಳಿ ನಡೆಸಿ ಆಕ್ರಮಿಸಿಕೊಳ್ಳಬೇಕೆಂದು ತೀರ್ಮಾನಿಸಿತು.

14. ಬೀಡಿ ಉದ್ಯಮದಲ್ಲಿರುವ ಕಂಟ್ರಾಕ್ಟ್ ಪದ್ಧತಿಯನ್ನು ರದ್ದು ಮಾಡಬೇಕು.

15. ಜಿಲ್ಲೆಯಲ್ಲಿ ಸಣ್ಣಪ್ರಮಾಣದ ಕೈಗಾರಿಕೆಗೆ ಸರ್ಕಾರ ಆದ್ಯಗಮನ ನೀಡಬೇಕು.

ಶಿಡ್ಲಘಟ್ಟ ರೈತಸಂಘದ ಕಚೇರಿಗೆ ಯಾವುದೇ ಬಾಡಿಗೆ ತೆಗೆದುಕೊಳ್ಳದೆ ಕೊಟ್ಟು ಸಹಕರಿಸುತ್ತಿರುವ ಕಟ್ಟಡ ಮಾಲೀಕರಾದ ತಾಲ್ಲೋಕಿನ ಜಂಗಮ ಕೋಟೆ ಹೋಬಳಿ ಮಳ್ಳೂರು ನಿವಾಸಿ ಶ್ರೀ ಕೆ. ಟಿ. ನಾರಾಯಣಸ್ವಾಮಿ ಅವರ ಉದಾರತೆಗೆ ಸಮ್ಮೇಳನದಲ್ಲಿ ವಂದನೆ ಸಲ್ಲಿಸಲಾಯಿತು. ●

ದಿ. ಗಣೇಶ್ ಪವಾರ ಕುಟುಂಬಕ್ಕೆ ಸಹಾಯ

ಹಳಿಯಾಳ ಪೋಲೀಸ್ ಗೋಲಿಬಾರಿಗೆ ಬಲಿಯಾಗಿ ಜೀವತೆತ್ತ ದಿ. ಮಾರುತಿ ಗಣೇಶ ಪವಾರ ಅವರ ಕುಟುಂಬಕ್ಕೆ (ಪತ್ನಿ ಮತ್ತು ಪುಟ್ಟ ಮಕ್ಕಳು) ತಮಗಿರುವ ಎರಡು ಮೂರು ಎಕರೆ ಹೊಲವನ್ನು ಉಳುಮೆ ಮಾಡಲು ಸುತ್ತುಮುತ್ತಲಿನ ಹಳ್ಳಿಗಳ ರೈತರು ಸಹಾಯ ಮಾಡಿದರು. ಕುಂಬಾರಕೊಪ್ಪ, ಬುಜರ ಕಂಚನಹಳ್ಳಿ, ಹಳಿಯಾಳ, ಖಾಮದಳ್ಳಿ, ತೆಗನಳ್ಳಿ, ಸಾತ್ಮಣಿ, ಯಡೋಗಾ, ಬಿದ್ರೋಳಿ- ಈ ಗ್ರಾಮಗಳ ಬಡರೈತ-ಕೂಲಿಗಾರರು ಆಗಸ್ಟ್ ತಿಂಗಳ 17, 22 ಮತ್ತು ಸೆಪ್ಟೆಂಬರ್ 1 ಮತ್ತು 3 ರಂದು ರೈತ ಮುಂದಾಳು ಕಾಂ. ಮ್ಹಾಳಸೇಕರ ಮತ್ತು ಕಾಂ. ಎಂ. ಸಮಿಉಲ್ಲಾ ಅವರ ನೇತೃತ್ವದಲ್ಲಿ ಕಳೆತೆಗೆದು, ಗೊಬ್ಬರ ಹಾಕುವ ಕೆಲಸವನ್ನು ಯಶಸ್ವಿಯಾಗಿ ನಡೆಸಿದರು. ಕೆಂಬಾವುಟ ಹಾಕಿ ನಡೆದ ಈ ಕಾರ್ಯಕ್ರಮ ಹೋರಾಟಕ್ಕೆ ಹೊಸ ಸ್ಫೂರ್ತಿ ಇತ್ತಿದೆ. ●

ಹತ್ತಿಗಿರಣಿ ಕಾರ್ಮಿಕರಿಗೆ ಕೂಲಿ ಹೆಚ್ಚಳ

ರಾಜ್ಯದ ಹತ್ತಿಗಿರಣಿ ಕಾರ್ಮಿಕರು ತಮ್ಮ ಹೋರಾಟದ ಫಲದಿಂದಾಗಿ ಗಣನೀಯ ಯಶಸ್ಸನ್ನು ಪಡೆದಿದ್ದಾರೆ. 26 ಹತ್ತಿಗಿರಣಿಗಳಿಗೆ ಸೇರಿದ ಸುಮಾರು 50 ಸಾವಿರ ಕಾರ್ಮಿಕರು 45 ರೂ. ಗಳಿಂದ 55 ರೂ. ಗಳ ವರೆಗಿನ ಹೆಚ್ಚಿನ ವೇತನವನ್ನು ಪಡೆಯುವರು.

ಗಿರಣಿಗಳ ಮಾಲೀಕರು ಹಾಗೂ ನೌಕರರ ನಡುವೆ ಒಂದು ಒಪ್ಪಂದವಾಗಿ ಹೊಸ ವೇತನವು 1979ರ ಜೂನ್ ತಿಂಗಳಿನಿಂದಲೇ ಜಾರಿಗೆ ಬರುವುದು. (ವಿವರಗಳು ಮುಂದಿನ ವಾರಕ್ಕೆ)

ಕೋಟೇಶ್ವರ : ಬೀಡಿ ಕಾರ್ಮಿಕ ಸಮಿತಿ ರಚನೆ

ದಕ್ಷಿಣ ಕನ್ನಡ ಜಿಲ್ಲೆಯ ಕೋಟೇಶ್ವರದಲ್ಲಿ ಮಹಿಳಾ ಬೀಡಿಕಾರ್ಮಿಕರ ಸಮಿತಿಯೊಂದನ್ನು ಕಳೆದ 10 ರಂದು ರಚಿಸಲಾಯಿತು.

ಸಮಿತಿಯ ಅಧ್ಯಕ್ಷೆಯಾಗಿ ಶ್ರೀಮತಿ ಪ್ರೇಮ, ಉಪಾಧ್ಯಕ್ಷೆಯಾಗಿ ರಾಧ ಹಾಗೂ ಸರೋಜಿ ಮತ್ತು ಸುಲೋಚನ ಮತ್ತು ಲಕ್ಷ್ಮಿ ಇವರುಗಳನ್ನು ಕಾರ್ಯದರ್ಶಿನಿಯರನ್ನಾಗಿ ನೇಮಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ ಕಾಂ. ಅಬ್ರಹಂ ಕರ್ಕಡ ಅವರು, ಕಾನೂನಿನ ಸೌಲಭ್ಯಗಳನ್ನು ಪಡೆಯಲು ಎಲ್ಲರೂ ಒಂದಾಗಬೇಕೆಂದು ಹೇಳಿದರು. ಕಾಂ. ಯು. ದಾಸಭಂಡಾರಿ ಸ್ವಾಗತಿಸಿದರು. ●

ಪೋಲೀಸ್ ದೌರ್ಜನ್ಯ ಪ್ರತಿಭಟಿಸಿ ಕುಂದಾಪುರ ಬಂದ್

ಶಾಂತಯುತವಾಗಿ ಮತಪ್ರದರ್ಶನ ಮಾಡುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಸೆ. 5 ರಂದು ನಡೆಸಿದ ದೌರ್ಜನ್ಯವನ್ನು ಪ್ರತಿಭಟಿಸಿ ಸೆ. 6 ರಂದು ಕುಂದಾಪುರ ಬಂದ್ ಆಚರಿಸಲಾಯಿತು. ಬಂದ್‌ಗೆ ಕರೆಕೊಟ್ಟಿದ್ದ ಕುಂದಾಪುರ ನಾಗರೀಕ ಸಮಿತಿಯು ಉನ್ನತ ಅಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಿ ಪೋಲೀಸರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ. ○

ಸಾರ್ವಜನಿಕ ಕ್ಷೇತ್ರದ ನೌಕರರ ಒಕ್ಕೂರಲಿನ ಪ್ರತಿಭಟನೆ

ಸೆಪ್ಟೆಂಬರ್ 14ರ ಮುಷ್ಕರ ಅಭೂತಪೂರ್ವ ಯಶಸ್ವಿ

ಬೆಂಗಳೂರಿನಲ್ಲಿ ಕಳೆದ ಜುಲೈ 19-20ರಂದು ಜರಗಿದ ಅಖಿಲ ಭಾರತ ಸಾರ್ವಜನಿಕ ಕ್ಷೇತ್ರದ ನೌಕರ ಸಂಘಟನೆಗಳ ಸಮಾವೇಶವು ನೀಡಿದ ಕರೆಯಂತೆ ತಾ. 14-9-79 ರಂದು ಆಚರಿಸಲಾದ ಒಂದು ದಿನದ ಸಾಂಕೇತಿಕ ಮುಷ್ಕರವು ದೇಶಾದ್ಯಂತ ಅಭೂತಪೂರ್ವ ರೀತಿಯಲ್ಲಿ ಯಶಸ್ವಿಯಾಗಿದ್ದು ಸಾರ್ವಜನಿಕ ಉದ್ಯಮಗಳ ಚಟುವಟಿಕೆಯನ್ನು ಒಂದು ದಿನ ಕಾಲ ಸಂಪೂರ್ಣ ಸ್ಥಗಿತಗೊಳಿಸಿದೆ.

ಸಾರ್ವಜನಿಕ ಕ್ಷೇತ್ರದ ನೌಕರರ ಬೇಡಿಕೆಗಳಿಗೆ ಸಂಬಂಧಿಸಿ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್‌ನ ಹಸ್ತಕ್ಷೇಪವನ್ನು ನಿಲ್ಲಿಸಬೇಕು. ನೌಕರ ಸಂಘಟನೆಗಳ ಸಾಮೂಹಿಕ ಚೌಕಾಶಿಯ ಹಕ್ಕನ್ನು ಸಂರಕ್ಷಿಸಬೇಕು, ತುಟ್ಟಿಬತ್ತೆ ನೀಡಿಕೆಯ ಬಗ್ಗೆ ಸರಕಾರ ತಳೆದಿರುವ ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಪ್ರತಿ ಅಂಕಕ್ಕೆ ರೂ. 1.30 ರಷ್ಟು ಮಾತ್ರ ಏರಿಕೆ ನೀಡುವ ಸೂತ್ರವನ್ನು ಕೈಬಿಡಬೇಕು, ಎಲ್ಲಾ ನೌಕರರಿಗೂ ಗರಿಷ್ಟ ಮಿತಿಯ ನಿರ್ಬಂಧವಿಲ್ಲದೆ ಬೋನಸ್ ನೀಡಬೇಕು ಎಂಬ ಹಲವು ಬೇಡಿಕೆಗಳ ಈಡೇರಿಕೆಗಾಗಿ ಮತ್ತು ಭೂತಲಿಂಗಂ ಸಮಿತಿಯ ಶಿಫಾರಸುಗಳನ್ನು ನೌಕರ ವರ್ಗದಮೇಲೆ ಬಲವಂತವಾಗಿ ಹೇರಲಾಗುತ್ತಿರುವುದನ್ನು ಪ್ರತಿಭಟಿಸಿ ಸಮಾವೇಶವು ಈ ಮುಷ್ಕರಕ್ಕೆ ಕರೆ ನೀಡಿತ್ತು.

ಸಾರ್ವಜನಿಕ ಕ್ಷೇತ್ರದ ಪ್ರಮುಖ ಉದ್ದಿಮೆಗಳಾದ ವಿಮೆ, ಬ್ಯಾಂಕುಗಳು, ಹೆಚ್.ಎ.ಎಲ್, ಹೆಚ್.ಎಂ.ಟಿ, ಬಿ.ಇ.ಎಲ್, ಬಿ.ಇ.ಎಮ್.ಎಲ್, ಐ.ಟಿ.ಐ. ಮುಂತಾದ ಅನೇಕ ಉದ್ಯಮಗಳಲ್ಲಿ ಮುಷ್ಕರವು ಅತ್ಯಂತ ಯಶಸ್ವಿಯಾಗಿದೆ. ಕೊನೇ ಗಳಿಗೆಯಲ್ಲಿ ಅಖಿಲ ಭಾರತ ಬ್ಯಾಂಕ್ ನೌಕರರ ಸಂಘಕ್ಕೆ ಸೇರಿದ ಕೆಲವು ರಾಜ್ಯ ಘಟಕಗಳು ಮುಷ್ಕರದಿಂದ ಹಿಂದೆ ಸರಿದು ಜುಲೈ 19-20 ರಂದು ಸಮಾವೇಶದಲ್ಲಿ ಎ.ಐ.ಬಿ.ಇ.ಎಯ ಪ್ರತಿನಿಧಿಗಳು ಸೇರಿದಂತೆ ಎಲ್ಲರೂ ಒಮ್ಮತದಿಂದ ಅಂಗೀಕರಿಸಿದ್ದ ಕಾರ್ಯಕ್ರಮಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡರೂ ಹೆಚ್ಚಿನ ಕಡೆ ಮುಖ್ಯವಾಗಿ ಪ.ಬಂಗಾಳ, ತಮಿಳುನಾಡು ಮತ್ತಿತರ ಕಡೆ ಎ.ಐ.ಬಿ.ಇ.ಎ.ಗೆ ಸೇರಿದ್ದ ನೌಕರರೂ ಮುಷ್ಕರದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ. ಅಖಿಲ ಭಾರತ ರಿಸರ್ವ್ ಬ್ಯಾಂಕ್ ನೌಕರರ ಸಂಘ, ಅಖಿಲ ಭಾರತ ವಿಮಾ ನೌಕರರ ಸಂಘ ಮತ್ತು ಇವೆರಡು ಉದ್ಯಮಗಳಿಗೆ ಸೇರಿದ ಇತರ ಸಂಘಟನೆಗಳೂ ಮುಷ್ಕರದಲ್ಲಿ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಿದ್ದಾರೆ.

ಬೆಂಗಳೂರು ನಗರದ ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಲ್ಲೂ ರಾಜ್ಯದ ಇನ್ನಿತರ ಕಡೆಗಳಿಂದಲೂ ಮುಷ್ಕರವು ಸಂಪೂರ್ಣ ಯಶಸ್ವಿಯಾದ ಕುರಿತು ವರದಿಗಳು ಬಂದಿವೆ. ಕುದುರೆಮುಖ ಕಬ್ಬಿಣ ಅದಿರು ಕಂಪೆನಿಗೆ ಸೇರಿದ ಹಿಂದೂಸ್ತಾನ್ ಸ್ಟೀಲ್ ಲಿಮಿಟೆಡ್‌ನ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದಾರಲ್ಲದೆ ಅದೇ ಉದ್ಯಮಕ್ಕೆ ಸೇರಿದ ಇನ್ನಿತರ ನೌಕರರೂ ಸಾರ್ವಜನಿಕ ಕ್ಷೇತ್ರದ ನೌಕರರಿಗೆ ಬೆಂಬಲವ್ಯಕ್ತಪಡಿಸಿ ತಾ. 14 ರಂದು ಮುಷ್ಕರ ಆಚರಿಸಿದ್ದಾರೆ. ○

ಹರಿಹರದಲ್ಲಿ ನಾಗರಿಕ ಸಮಿತಿ ರಚನೆ

ಬೆಲೆ ಏರಿಕೆಯ ವಿರುದ್ಧ ದಿನನಿತ್ಯ ಬಳಕೆಯ ಪದಾರ್ಥಗಳನ್ನು ಸಹಕಾರ ಸಂಘಗಳ ಮೂಲಕ ನಾಗರೀಕರಿಗೆ ಸರಬರಾಜು ಮಾಡುವ ಉದ್ದೇಶಕ್ಕಾಗಿ, ರೈತರ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಕೊಡಿಸುವುದು ಮುಂತಾದ ಬೇಡಿಕೆಗಳನ್ನು ಗಳಿಸಲು ಹರಿಹರದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಬಲ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ ಸಂಘ ಮತ್ತು ಕೆಲವು ಕಾರ್ಮಿಕ ಸಂಘಗಳ ನಾಗರೀಕ ಸಮಿತಿಯೊಂದನ್ನು ಸೆ. 16 ರಂದು ರಚಿಸಲಾಯಿತು. ಎಲ್ಲ ಪಕ್ಷಗಳು ಮತ್ತು ಸಂಘ ಸಂಸ್ಥೆಗಳು ಭಾಗವಹಿಸಿದ್ದ ಈ ಸಭೆಯಲ್ಲಿ 21 ಜನರ ಕ್ರಿಯಾ ಸಮಿತಿಯೊಂದನ್ನು ರಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಸಿ. ಪಿ. ಐ. (ಎಂ) ಮುಖಂಡ ಕಾಂ. ಸೀತಾಪತಿಯವರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ ವಕೀಲರ ಸಂಘದ ಪ್ರತಿನಿಧಿ ವಿಠೋಬರಾವ್, ಸಿ. ಪಿ. ಐ. ನ ಜೆ. ಎಂ. ಹನುಮಂತಪ್ಪ, ಕರ್ನಾಟಕ ಸಂಘದ ರಾಜಗೋಪಾಲ್‌ರಾವ್ ಅವರು ಮಾತನಾಡಿದರು. ○

ಸಂಜಯ್, ರಾಜ್ ಚರಿತ್ರೆಗೆ ತಿರುವು ಕೊಡುತ್ತಾರೆ-ಏಕೆ ?

[2ನೇ ಪುಟದಿಂದ]

"ಆ ಸಂಕೇತ ಈ ಸಂಕೇತ ಅಂತ ಏನೇನೋ ಮಾತನಾಡಬೇಡಿ. ನೇರವಾಗಿ ಮಾತನಾಡೋಣ. ನಾವು ನಾಶ ಮಾಡಬೇಕಾದದ್ದು ಚರಣ್‌ಸಿಂಗ್ ಎತ್ತಿ ಹಿಡಿಯುವ ಮೌಲ್ಯಗಳನ್ನು, ಇಂದಿರಾ ಹಿಂದಿರುವ ಮೌಲ್ಯಗಳನ್ನು, ಧಾರ್ಮಿಕ ಮಾನಸಿಕ ಹಾಗು ಮೌಢ್ಯದ ಮೌಲ್ಯಗಳನ್ನು. ಅದನ್ನು ಬಿಟ್ಟು ಇಂದಿರಾನ ಮುಗಿಸೋದು, ಮೊರಾರ್ಜಿನ ಮುಗಿಸೋದು, ಜೆ. ಎಚ್. ಪಟೇಲರನ್ನು ಮುಗಿಸೋದು ಅಂತ ಹೋಗುವುದರಲ್ಲಿ ಅರ್ಥವಿಲ್ಲ. ಈ ನಾಟಕ ನಡೆಯುತ್ತಲೇ ಇರುತ್ತದೆ. ನಿಮಗೆ ನೀವೇ ಮೋಸ ಮಾಡಿಕೊಳ್ಳಬೇಡಿ" ಎಂದು ಲಂಕೇಶ್ ಉತ್ತರವಿತ್ತರು.

ಈ ಮಾತಿನ ಚಕಮಕಿಯ ನಂತರ ಸಮಯವಾದ್ದರಿಂದ ವಿಚಾರ ಸಂಕಿರಣ ಮುಗಿಯಿತು.

ಪ್ರಾರಂಭದಲ್ಲಿ ಶಾಲೆಯ ಪರವಾಗಿ ಸ್ವಾಗತ ಭಾಷಣ ಮಾಡಿದ ಶಾಲೆಯ ನಿರ್ದೇಶಕ ಡಿ. ಆರ್. ನಾಗರಾಜ್ ಅವರು ಮಾತನಾಡಿ, ಆಹ್ವಾನವನ್ನು ಒಪ್ಪಿಕೊಂಡೂ ಸಭೆಗೆ ಗೈರುಹಾಜರಾದ ಸಚಿವ ಹಾವನೂರ್ ಅವರ ಬೇಜವಾಬ್ದಾರಿ ನಡವಳಿಕೆಯನ್ನು ಉಗ್ರವಾಗಿ ಪ್ರತಿಭಟಿಸಿದರು.

ಶಾಲೆಯ ಅಧ್ಯಕ್ಷ ಪ್ರೊ. ಬಿ. ಕೆ. ಚಂದ್ರಶೇಖರ್ ಅವರು ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು. ●

ಸಂಜಯಗಾಂಧಿಯ ಕರ್ಮಕಾಂಡ

[ಒಂದನೇ ಪುಟದಿಂದ]

ತೀರ್ಮಾನ ತೆಗೆದುಕೊಳ್ಳದೆ 4 ತಿಂಗಳು ಕಾಲವ್ಯಯ ಮಾಡಿದರು. ಮಿಲಿಟರಿ ವಿಮಾನಗಳ ಮತ್ತು ಚಾಲಕ ಸಿಬ್ಬಂದಿಯ ಸುರಕ್ಷತೆಯ ಬಗ್ಗೆ ಇವರಿಗೇನೂ ಚಿಂತೆಯಿರಲಿಲ್ಲ.

ಆ ಮುನ್ನೂರು ಎಕರೆ ಜಮೀನಿನಿಂದ ಒಕ್ಕಲೆಬ್ಬಿಸಿದ ರೈತರು ಏನಾದರು? ಅವರು ತಮ್ಮ ಬದುಕಿನ ಏಕೈಕ ಆಧಾರವನ್ನೇ ಕಳೆದುಕೊಂಡಿದ್ದರು. ಆದರೆ ಅವರಿಗೆ ಸಾಕಷ್ಟು ಸಹಾಯಧನ ಕೊಡಬೇಕೆಂಬ ಆಲೋಚನೆ ಗರೀಬಿ ಹಟಾವೋ ಧುರೀಣೆ ಇಂದಿರಾಗಾಗಲಿ ಮಗರಾಯನಿಗಾಗಲಿ ಬರಲಿಲ್ಲ. ಸಂಜಯನ ಫ್ಯಾಕ್ಟರಿಗಾಗಿ ಅವರನ್ನು ಕಸದಂತೆ ರಸ್ತೆಗೆ ಬಿಸಾಕಿದರು.

ಒಬ್ಬ ಪುಂಡ ಇನ್ನೊಬ್ಬ ಪುಂಡನ ಜೊತೆ ಸೇರಿದ. ಹರ್‍ಯಾಣದ ಮುಖ್ಯ ಮಂತ್ರಿ ಬನ್ಸಿಲಾಲ್ ಸಂಜಯನ ಕಾರು ನಿರ್ಮಾಣ ಯೋಜನೆಗೆ ಅನೇಕ ರಿಯಾಯ್ತಿಗಳನ್ನು ಕೊಟ್ಟು ಆ ಬಗ್ಗೆ ರಾಷ್ಟ್ರಾಧ್ಯಕ್ಷ ಫಕ್ರುದ್ದೀನ್ ಅಲಿ ಅಹ್ಮದರಿಗೆ ಕಾಗದ ಬರೆದ. ಆಗಿನ್ನೂ ಹರ್‍ಯಾಣ ಸರ್ಕಾರ ಈ ಬಗ್ಗೆ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿರಲಿಲ್ಲ. ಇದು ಬನ್ಸಿಲಾಲನ ವಿರುದ್ಧ ಭ್ರಷ್ಟಾಚಾರದ ಆರೋಪ ಬರುತ್ತಿದ್ದ ಕಾಲ. ಆತನ ವಿರುದ್ಧ ಮನವಿಪತ್ರಗಳ ಮೇಲೆ ಮನವಿ ಪತ್ರಗಳನ್ನು ಸಲ್ಲಿಸಲಾಗುತ್ತಿದ್ದ ಕಾಲ. "ಪ್ರಧಾನ ಮಂತ್ರಿಯನ್ನು ಮೆಚ್ಚಿಸಲು ಆಕೆಯ ಮಗನಿಗೆ ಹಿಂದೆಂದೂ ಯಾವ ಕೈಗಾರಿಕೋದ್ಯಮಿಗೂ ಕೊಡಲಾಗದ ಸೌಲಭ್ಯಗಳನ್ನು ಮತ್ತು ಅವನ ಕಾರಿನ ಫ್ಯಾಕ್ಟರಿಗೆ ಜಮೀನನ್ನು ಕೊಡಲಾಯಿತು." ಆದ್ದರಿಂದ ಬನ್ಸಿಲಾಲನ ವಿರುದ್ಧ ಕೊಡಲಾದ ಮನವಿ ಪತ್ರಗಳ ಬಗ್ಗೆ ಪ್ರಧಾನಿ ಏನೂ ಕ್ರಮ ಕೈಗೊಳ್ಳದಿದ್ದರಲ್ಲಿ ಆಶ್ಚರ್ಯವಿಲ್ಲ. ಇಷ್ಟೇ ಅಲ್ಲ, ಈತನನ್ನು ತುರ್ತು ಪರಿಸ್ಥಿತಿಯ ಕಾಲದಲ್ಲಿ ಕೇಂದ್ರದ ರಕ್ಷಣಾ ಮಂತ್ರಿ ಸ್ಥಾನಕ್ಕೇರಿಸಲಾಯಿತು.

ಕಾರು ಉತ್ಪಾದನೆಗೆ ಸಾರ್ವಜನಿಕ ಕ್ಷೇತ್ರವೇ ಯೋಗ್ಯ ಎಂಬ ನಿರ್ಧಾರಕ್ಕೆ ಇಂದಿರಾ ಸರ್ಕಾರವೇ ಬಂದಿತ್ತು. ಆದರೆ ಸಂಜಯನ ಕಾರಿನ ಯೋಜನೆ ಬಂದಾಗ, ಈ ನಿರ್ಧಾರವನ್ನು ಮರೆತು ಆತನ ಕಾರಿನ ಕಂಪನಿಗೆ ಲೈಸನ್ಸ್ ಕೊಡಲಾಯಿತು. ಈತನ ಹಾಗೆಯೇ ಇತರ ಕೆಲವು ಕೈಗಾರಿಕೋದ್ಯಮಿಗಳೂ ಕಾರಿನ ನಿರ್ಮಾಣಕ್ಕೆ ಯೋಜನೆ ಹಾಕಿ ಲೈಸೆನ್ಸ್ ಕೇಳಿದ್ದರೂ ಅವರಿಗೆ ಲೈಸೆನ್ಸ್ ನಿರಾಕರಿಸಿದರು. ಸಣ್ಣ ಕಾರು ಉತ್ಪಾದನೆಯಲ್ಲಿ ಸಂಜಯನದೇ ಏಕಸ್ವಾಮ್ಯವಾಯಿತು.

ಸಂಜಯನ ಮಾರುತಿ ಕಾರು ರಸ್ತೆಗೆ ಬರಲು ಯೋಗ್ಯವಾಗಿರಲಿಲ್ಲ. ಕಾರನ್ನು ಪರೀಕ್ಷಿಸಲು ಸರ್ಕಾರವೇ ನೇಮಕ ಮಾಡಿದ್ದ ಅಧಿಕಾರಿಗಳು ಅದು ರಸ್ತೆಗೆ ಲಾಯಕ್ಕೆಂದು ತೀರ್ಮಾನ ಕೊಡಲಿಲ್ಲ. ಆದರೂ ಈ ಕಾರಿಗೆ ಲೈಸೆನ್ಸ್ ಕೊಡಲಾಯಿತು.

ಈ ಮಾರುತಿ ಕಾರಿನ ಉತ್ಪಾದನೆಗೆ ವಿದೇಶಿ ಸಹಯೋಗವಿರಬಾರದೆಂದು ಹೇಳಲಾಗಿತ್ತು. ಆದರೆ ಸಂಜಯ ಗಾಂಧಿ ಜರ್ಮನ್ ಎಂಜಿನೊಂದನ್ನು ಕಾರಿಗೆ ಅಳವಡಿಸಿ ಅದು ತನ್ನದೇ ಎಂಬಂತೆ ಮಾತನಾಡಿದ. ಇಂದಿರಾ ಗಾಂಧಿ ಮತ್ತು ಆಕೆಯ ಸಹೋದ್ಯೋಗಿಗಳು ಕಾರು ಅಪ್ಪಟ ಸ್ವದೇಶಿ ಆಗಿರುತ್ತದೆ ಎಂದು ಹೇಳುತ್ತಲೇ ಇದ್ದರು.

ಸಂಜಯ ಗಾಂಧಿ ಶೇರುದಾರರಿಗೆ ಮತ್ತು ಮಾರಾಟಗಾರರಿಗೆ ಲಕ್ಷಾಂತರ ರೂಪಾಯಿ ಮೋಸಮಾಡಿದ. ಅವರು ತಕರಾರು ಮಾಡಿದಾಗ, ಮೀಸಾದಡಿ ಜೈಲಿಗೆ ತಳ್ಳುತ್ತೇನೆಂದು ಬೆದರಿಸಿದ.

ಮಾರುತಿ ಕಂಪನಿಯ 1975-76 ರಲ್ಲಿ ತೋರಿಸಿದ ಬ್ಯಾಲೆನ್ಸ್ ಶೀಟಿನಲ್ಲಿ ಡೀಲರ್‌ಶಿಪ್ ಡಿಪಾಸಿಟ್‌ಗಳ ಮೊತ್ತ ರೂ. 25,507,688 ಎಂದಿದೆ. ಆದರೆ 1975 ಮಾರ್ಚ್‌ನಲ್ಲಿ ಡೀಲರ್‌ಶಿಪ್ ರಿಸರ್ವೇಶನ್ ಹಣ ಕೇವಲ ರೂ. 2,767,000 ಇತ್ತು. ಹಣದ ಬಹುಪಾಲನ್ನು ಮಾರಾಟಗಾರರಿಗೆ ಕೊಟ್ಟೇ ಇರಲಿಲ್ಲ.

ಲೆಕ್ಕ ಸಿಗದ ಹಣಕ್ಕೆ ಲೆಕ್ಕ ತೋರಿಸಲು ಬೇನಾಮಿ ಶೇರುದಾರರನ್ನು ತೋರೀಸಿದರು. ಇಂದಿರಾ ಸರ್ಕಾರದಿಂದ ಉಪಯೋಗ ಪಡೆದಿದ್ದ ಶ್ರೀಮಂತರಿಂದ ರಾಜಕೀಯ ವಂತಿಗೆಗಳನ್ನು ಸ್ವೀಕರಿಸಿದರು. ಹೀಗೆ ಇಂದಿರಾ ಗಾಂಧಿಯ ಮಗರಾಯನಿಗಾಗಿ ಮಾಡದ ದುರ್ವ್ಯವಹಾರ ಇಲ್ಲವೇ ಇಲ್ಲ.

ಸಂಜಯ ಗಾಂಧಿಯಂತೆ ಇಂದಿರಾ ಗಾಂಧಿಯೂ ತಪ್ಪಿತಸ್ಥೆ ಎಂದು ಗುಪ್ತಾ ಆಯೋಗದ ವರದಿ ಹೇಳುತ್ತದೆ. ಪ್ರಧಾನಿಯ ಸೆಕ್ರೆಟಾರಿಯಟ್‌ನವರೆ ಇದರಲ್ಲಿ ವಿಶೇಷ ಆಸ್ಥೆ ತೋರಿಸಿದ್ದರು. ಈ ಕಂಪನಿಗಾಗಿ ದೇಶದ ರಕ್ಷಣಾ ಇಲಾಖೆಯ ಹಿತಾಸಕ್ತಿಗಳನ್ನು ಬಲಿ ಕೊಡಲೂ ಅವರು ಹೇಸಲಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಅಕ್ರಮಗಳ ಬಗ್ಗೆ ಇದ್ದ ಸಾಕ್ಷಿ ಪುರಾವೆಗಳನ್ನು ಇಂದಿರಾ ಗಾಂಧಿ ನಾಶ ಮಾಡಲು ಪ್ರಯತ್ನಿಸಿದರು. ಸಂಸತ್ ಸದಸ್ಯರ ಪ್ರಶ್ನೆಗಳಿಗೆ ನೀಡುವ ಎಲ್ಲ ಉತ್ತರಗಳನ್ನೂ ಸ್ವತಃ ಇಂದಿರಾಗಾಂಧಿಯವರೇ ಪರಿಶೀಲಿಸುತ್ತಿದ್ದರು ಎಂಬುದೂ ವರದಿಯಲ್ಲಿ ಸ್ಪಷ್ಟವಾಗಿದೆ.

"ಶ್ರೀ ತನೇಜಾ ಅವರ ಅಧಿಕಾರಾವಧಿಯನ್ನು ಶ್ರೀಮತಿ ಇಂದಿರಾಗಾಂಧಿಯವರು ವಿಸ್ತರಿಸದಿರಲು ಮುಖ್ಯ ಕಾರಣವೆಂದರೆ ಆತ ಸಂಜಯ ಗಾಂಧಿಯ ಮಾರುತಿ ಕಂಪನಿಗೆ 1.5 ಕೋಟಿ ರೂಪಾಯಿ ಕೊಡುವುದು ತರವಲ್ಲ ಎಂಬ ನಿರ್ಧಾರ ತೆಗೆದುಕೊಂಡಿದ್ದು" ಎಂದು ವರದಿಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ಸಂಜಯಗಾಂಧಿ ತನೇಜಾ ಅವರನ್ನು ಬೆದರಿಸಿದ. ತನೇಜ ವಿರುದ್ಧ ಒಂದು ವಿಚಾರಣೆ ನಡೆಸಬೇಕೆಂದೂ ನಿರ್ಧಾರವಾಯಿತು. ಆದರೆ ಇದನ್ನು ಮುಂದೆ ಕೈಬಿಡಬೇಕಾಯಿತು. ಸಂಜಯ ಗಾಂಧಿಯ ಚಟುವಟಿಕೆಗಳ ಬಗ್ಗೆ ನಿಜ ಸಂಗತಿಗಳನ್ನು ಹೊರತರಲು ಪ್ರಯತ್ನಿಸಿದ ಅಧಿಕಾರಿಗಳಿಗೆ ಉಪಟಳ ಕೊಟ್ಟರು, ಮತ್ತವರಲ್ಲಿ ಕೆಲವರನ್ನು ಮೀಸಾದಡಿ ಜೈಲಿಗೂ ತಳ್ಳಿದರು.

ಗುಪ್ತಾ ಆಯೋಗದ ವರದಿ ರಾಜಕೀಯ ದುರುದ್ದೇಶದಿಂದ ಕೂಡಿದ್ದು ಎಂದು ಹೇಳುವವರಿಗೆ ನಾಚಿಕೆಯೇ ಇಲ್ಲವೆಂದು ಕಾಣುತ್ತದೆ. ತುರ್ತುಪರಿಸ್ಥಿತಿಯ ಸರ್ವಾಧಿಕಾರದ ಕಾಲದಲ್ಲಿ ರಾಜಕೀಯ ದಮನ ಜೊತೆಗೆ ವೈಯಕ್ತಿಕ ಭ್ರಷ್ಟಾಚಾರವೂ ತಳುಕು ಹಾಕಿಕೊಂಡಿತ್ತೆಂಬುದನ್ನು ಈ ವರದಿ ಸ್ಪಷ್ಟ ಮಾಡಿದೆ.

ಪ್ರಜಾತಂತ್ರದ ಬಗ್ಗೆಯಾಗಲಿ ಜನರ ಸಂಕಷ್ಟದ ಬಗ್ಗೆಯಾಗಲಿ ಮಾತನಾಡುವ ನೈತಿಕ ಹಕ್ಕನ್ನೇ ಕಳೆದುಕೊಂಡಿರುವ ಇಂದಿರಾ ಗಾಂಧಿ ಮತ್ತೆ ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ. ಆಕೆಯೇನಾದರೂ ಗೆದ್ದು ಬಂದರೆ ಸಂಜಯ ಗಾಂಧಿ–ಬನ್ಸಿಲಾಲರ ದುಷ್ಟಕೂಟದ ಭ್ರಷ್ಟ ಆಡಳಿತವೇ ಮರುಕಳಿಸುತ್ತದೆ ಎಂಬುದನ್ನು ಎಲ್ಲರೂ ಗಮನಿಸಬೇಕು. ○

ಸದಸ್ಯರ ಗಮನಕ್ಕೆ

ಕರ್ನಾಟಕ ಪ್ರಾಂತ ರೈತಸಂಘದ ಕಾರ್ಯಕಾರಿ ಸಮಿತಿ ಸಭೆಯು ತಾ. 27-9-79 ರಂದು ಬೆಳಿಗ್ಗೆ 9 ಘಂಟೆಗೆ ಬೆಂಗಳೂರಿನಲ್ಲಿ ಸೇರಲಿದೆ.

ಅಕ್ಟೋಬರ್ ತಿಂಗಳ ಕೊನೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಅಖಿಲ ಭಾರತ ಕಿಸಾನ್ ಸಭೆಯ ಕೌನ್ಸಿಲ್ ಸಭೆಗೆ ತಯಾರು ಮಾಡಲಿಕ್ಕೂ ಮತ್ತು ಆ ಸಂದರ್ಭದಲ್ಲಿ ರಾಜ್ಯಮಟ್ಟದ ಕಿಸಾನ್ ರ್‍ಯಾಲಿಯನ್ನು ನಡೆಸುವ ವಿಷಯದ ಬಗ್ಗೆಯೂ ಚರ್ಚಿಸಲಾಗುವುದು.

ಪ್ರಾಂತ ರೈತಸಂಘದ ಸಮಿತಿ ಸದಸ್ಯರೆಲ್ಲರೂ ತಪ್ಪದೆ ಹಾಜರಾಗಬೇಕಾಗಿ ಕೋರಿದೆ.

ಪಿ. ರಾಮಚಂದ್ರರಾವ್
ಪ್ರಧಾನ ಕಾರ್ಯದರ್ಶಿ.

ಎಚ್. ಮುಗುವಾಳಪ್ಪ
ಅಧ್ಯಕ್ಷ.

ಸಂಪಾದಕೀಯ

[ಒಂದನೇ ಪುಟದಿಂದ]

ಆರ್. ಎಸ್. ಎಸ್. ವಿಷಯದ ಬಗ್ಗೆಯೂ ಶ್ರೀ ದೇಸಾಯಿಯವರು ವಿವರಣೆ ಕೊಡುತ್ತಾ ಆ ಸಂಘಟನೆಯು ರಾಜಕೀಯ ಸಂಘಟನೆಯಲ್ಲವೆಂದೂ ಅದರಿಂದ ಯಾವ ಅಪಾಯವೂ ಇಲ್ಲವೆಂದೂ ಒತ್ತಿ ಹೇಳಿದ್ದಾರೆ. ಜನತಾ ಪಕ್ಷದಲ್ಲಿ ದ್ವಿಸದಸ್ಯದ ಬಗ್ಗೆ ವಿವಾದ ಎದ್ದು, ಪಾರ್ಟಿ ಒಡೆದು ಸರಕಾರ ಪತನವಾದ ನಂತರ ಶ್ರೀ ವಾಜಪೇಯಿಯವರೇ ಆರ್.ಎಸ್.ಎಸ್. ನಿಂದ ಜನತಾ ಪಾರ್ಟಿಗಾದ ಹಾನಿಯನ್ನು ಬಹಿರಂಗವಾಗಿ ಹೇಳಿದ್ದರೂ, ಆರ್.ಎಸ್.ಎಸ್.-ಜನಸಂಘೀಯ ಕೋಮುವಾರು ಶಕ್ತಿಯ ಅಪಾಯವನ್ನು ಇತರರೆಲ್ಲಾ ಮನಗಾಣುತ್ತಿದ್ದು ಅದನ್ನು ದೂರಪಡಿಸಲು ಪ್ರಯತ್ನಗಳು ನಡೆಯುತ್ತಿರುವಾಗ ಶ್ರೀ ದೇಸಾಯಿಯವರು ಆರ್. ಎಸ್. ಎಸ್. ನಾಯಕ ಬಾಳಾಸಾಹೇಬ್ ದೇವರಸ್‌ರವರ ಸಮರ್ಥನೆ ಮಾಡಿರುವುದು ಆಶ್ಚರ್ಯಕರವಾಗಿದೆ. ಅಧಿಕಾರದಲ್ಲಿದ್ದಾಗ ದೇಸಾಯಿಯವರು ಜನಸಂಘ ಗುಂಪಿನ ಕಪಿಮುಷ್ಠಿಯಲ್ಲಿದ್ದರು. ಈಗ ಜನತಾ ಒಡೆದ ಮೇಲೆ ಜನತಾ ಪಾರ್ಟಿಯು ಸಂಪೂರ್ಣವಾಗಿ ಜನಸಂಘದವರ ಪಾರ್ಟಿಯಾಗಿರುವುದರಿಂದ ದೇಸಾಯಿಯವರು ಈಗ ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ಇದರಿಂದ ಜನತಾ ಪಾರ್ಟಿಗೆ ಹೆಚ್ಚಿನ ಕಳಂಕ ಬಂದು ಅದರಿಂದ ಜನ ದೂರ ಸರಿಯುವುದು ಖಂಡಿತ.

ಶ್ರದ್ಧಾಂಜಲಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ಬಹಳ ದೀರ್ಘ ಕಾಲದಿಂದಲೂ ಶ್ರಮಿಸಿದ ದ. ಕನ್ನಡ ಜಿಲ್ಲೆ ಜಪ್ಪಿನಮೊಗ್ರು ಬಜೆಹಿತ್ಲುವಿನ ವೆಂಕಪ್ಪ ಕೊಟ್ಟಾರಿಯವರು ಸೆ. 5 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪಕ್ಷದ ಜಪ್ಪಿನಮೊಗ್ರು ಶಾಖೆಯು ದಿವಂಗತರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆ. ●

ಪರಿಸರ

ಸಿ.ಪಿ.ಐ. ನವರು ಇಂದಿರಾ ಕಾಂಗ್ರೆಸ್ಸಿನ ಜೊತೆ ಸೇರಿ ತಮ್ಮ ಆಶೋತ್ತರಗಳನ್ನು ಈಡೇರಿಸಿಕೊಳ್ಳಲು ವಿಫಲರಾದಂತೆ ಸೋಷಿಯಲಿಸ್ಟರು ಜನತಾಪಕ್ಷದೊಡನೆ ಸೇರಿ ವಿಫಲರಾದರು.

—ಪ್ರೊ. ಎಂ.ಡಿ. ನಂಜುಂಡಸ್ವಾಮಿ
(ಪ್ರಸಿದ್ಧ ಲೋಹಿಯಾವಾದಿ)

ನಾಟಕಗಳು ಮತ್ತು ಕಾದಂಬರಿಗಳ ಮೇಲೆ ಸೆನ್ಸಾರ್‌ಶಿಪ್ ಇಲ್ಲದಿರುವಾಗ ಚಲನಚಿತ್ರಗಳ ಮೇಲೆ ಮಾತ್ರ ಏಕೆ? ನಿರ್ಬಂಧ ಯಾವುದರ ಮೇಲೂ ಕೂಡದು.

—ಎಂ.ಎಸ್. ಸತ್ಯು
(ಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕ)

ನಮ್ಮ ದೇಶಕ್ಕೆ ಇನ್ನೂ 10 ವರ್ಷಗಳು ಸ್ವಾತಂತ್ರ ಕೊಡಬಾರದೆಂದು ಜಗಜೀವನ್‌ರಾಮ್ ಅವರು ಲಾರ್ಡ್ ಮೌಂಟ್‌ಬ್ಯಾಟನ್‌ಗೆ ಕಾಗದ ಬರೆದಿದ್ದರು. ಆ ಕಾಗದದ ಪ್ರತಿಯೊಂದು ನನ್ನ ಬಳಿ ಇದೆ.

—ರಾಜ್‌ನಾರಾಯಣ್

ಈ ದೇಶದ ಆಡಳಿತವನ್ನು ಆರ್.ಎಸ್.ಎಸ್. ಇನ್ನು ಹತ್ತು ವರ್ಷಗಳಲ್ಲಿ ನಡೆಸುವುದು.

—ಬಾಳಸಾಹೇಬ್ ದೇವರಸ್
(ಆರ್.ಎಸ್.ಎಸ್. ನ ಮುಖ್ಯಸ್ಥ)

ಆರ್. ಎಸ್. ಎಸ್. ಹತ್ತು ವರ್ಷಗಳಲ್ಲಿ ಅಧಿಕಾರಕ್ಕೆ ಬರುವುದು ಎಂದು ಹೇಳುವ ಮೂಲಕ ಆ ಸಂಸ್ಥೆಯು ರಾಜಕೀಯ ಸಂಸ್ಥೆ ಎಂದು ಬಾಳಸಾಹೇಬ್ ದೇವರಸ್ ಬಹಿರಂಗವಾಗೇ ಒಪ್ಪಿದ್ದಾರೆ. ಇದಕ್ಕಾಗಿ ಅವರಿಗೆ ವಂದನೆಗಳು.

—ಜಾರ್ಜ್‌ಫರ್ನಾಂಡಿಸ್

ನಮಗೆ ಖೋತಾ ಬಜೆಟ್ಟಿನ ವ್ಯವಹಾರವೇ ಬೇಡ ಎಂದು ಜನತಾ ಪಕ್ಷದವರು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರೂ ಕಳೆದ ಎರಡು ವರ್ಷಗಳು ಅವರು ಮಂಡಿಸಿದ್ದು ಖೋತಾ ಬಜೆಟ್ಟೆ.

—ಡಾ|| ಬಿ.ಕೆ. ಚಂದ್ರಶೇಖರ್
(ಪ್ರೊಫೆಸರ್: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್)

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office: L-56, K. V. Temple Street, Sultanpet, Bangalore-560 053. Phone: 24154
EDITOR: M. K. BHAT